ಅಪ್ರತಿಮ ಸುಂದರ ಕರಕುಶಲತೆ
ಪರಿಪೂರ್ಣತೆಯ ಹಂತದ ಸಂತೃಪ್ತಿ
ಗ್ಲೆನಿಶಿಯಾ ಡಿಸೈನರ್
ಡೋರ್ & ಗ್ಲೆಶು ಫರ್ನಿಚರ್
ನಂದಳಿಕೆ, ವಯಾ ಬೆಳ್ಮಣ್, ಕಾರ್ಕಳ ತಾಲೂಕು
ಫೋನ್: 08258-274075, 285060
ಶೋರೂಂ, ನಂದಳಿಕೆ
ಸಹ ಸಂಸ್ಥೆ: ಜೀನಸ್ ವುಡ್ ಇಂಡಸ್ಟ್ರೀಸ್ ಸೊಮಿಲ್, ನಂದಳಿಕೆ
ಪ್ರೊ| ಗ್ರೆಗರಿ ಬಿ. ಮಿನೇಜಸ್(ಎಡ್ಡಿ)

ಸಂಪಾದಕರು: ರೇಮಂಡ್ ಡಿ'ಕುನಾ
ಎಂ.ಎ. ಇನ್ ಜರ್ನಲಿಸಂ, ಬಿ.ಎ.,ಎಲ್.ಎಲ್.ಬಿ.
ESTD: 2004 E-mail:pingaara@gmail.com

20ನೇ ವರ್ಷ
# ಪಿಂಗಾರ
ಮುಂಬೈ, ದ.ಕ., ಉಡುಪಿ, ಕಾಸರಗೋಡು ಜಿಲ್ಲೆಗಳ ಏಕೈಕ ಪತ್ರಿಕೆ
Licensed to post without prepayment Licence No. SK/WPP / MNG / 183/2022-24
Regd. No.: MNG/954/2022-2024

impression
The Copier Solutions
- Multi Colour Copiers,
- Black & White Copiers
- Spiral Binding
- Spares & Toners
- Laser printer Catridges & Refill
Also we provide copiers for Rental
Lawrence - 9741885005, 9164845005
Impressionl2016@gmail.com
#3w-3-265, Near Marilyn Apartment,
Opp. AL helen, Bejai, Mangalore - 575 004
Canon Konica Minolta xerox KYOCERA EPSON

● RNI: KARKAN/2009/29901 ● ಸಂಪುಟ:20 ● ಸಂಚಿಕೆ:05 ● ಪುಟ: 6 ● PINGARA Published & Posted on 09 March 2023 at M'luru Head Post Office ● ಮಾರ್ಚ್ 15, 2023 ● ಮಂಗಳೂರು, MANGALURU ● ಬೆಲೆ: ರೂ. 3

## ಭೋರ್ಗರೆವ ತೀರದಲ್ಲಿ ಹೊಯ್ಗೆಯ ಅರಮನೆ

ಮಾನವ ಏನೇನೆಲ್ಲಾ ಕಂಡುಹಿಡಿದರೂ ರಕ್ಕಸ ತೆರೆಗಳಿಂದ ಸಮುದ್ರದ ತೀರವನ್ನುರಕ್ಷಿಸುವುದು ಹೇಗೆ ಎನ್ನುವುದು ಮಾತ್ರ

ಸವಾಲಿನ ವಿಷಯುವಾಗಿಯೇ ಉಳಿದಿದೆ. ಪ್ರತಿವರ್ಷ ಮೀಟರುಗಟ್ಟಲೆ ತೀರಗಳು ಸಮುದ್ರದ ಪಾಲಾಗುತ್ತಿದ್ದು, ತೀರದ

ನಿವಾಸಿಗಳು ನಿರ್ವಸತಿಕರಾಗುತ್ತಿದ್ದಾರೆ. ಕಡಲ್ಕೊರೆತಕ್ಕೆ ಕಾರಣಗಳು ಹಲವಾರಿದ್ದರೂ ನಿರ್ವಹಣೆ ಮಾತ್ರ ಸರಕಾರಗಳಿಗೆ

ಸವಾಲಾಗಿಯೇ ಉಳಿದಿದೆ. ಬಂಡೆಗಳು, ಕಾಂಕ್ರೀಟ್ ತಡೆಗಲ್ಲುಗಳು, ಮರಳಿನ ಚೀಲಗಳು, ಅಲೆಗಳ ಶಕ್ತಿಯುನ್ನು ಕಡಿಮೆಗೊಳಿಸಲು ಹಲವಾರು ತಂತ್ರಜ್ಞಾನಗಳನ್ನೂ ಬಳಸಿದ ನಂತರವೂ ಸಮುದ್ರದ ಹಸಿವೆಯು ತೀರಗಳನ್ನು

ಇಂಚಿಂಚಾಗಿ ನುಂಗುತ್ತಲೇ ಇದೆ ಇವೆಲ್ಲದುದರ ಮಧ್ಯೆ ಸಬೆಲ್ಲಾರಿಯಾ ಎಂಬ ದುಂಡುಹುಳ ಮಾತ್ರ ನಿರ್ಲಿಪ್ತವಾಗಿ

ಅರಮನೆಯುನ್ನು ಕಟ್ಟಿಕೊಂಡು ಇನ್ನಿತರ ಜೀವವೈವಿಧ್ಯಕ್ಕೂ ಆಸರೆಯಾಗಿದೆ.

ಸಬೆಲ್ಲಾರಿಯಾವು(Sabellaria sp.) ದುಂಡು ಹುಳಗಳ ಗುಂಪಿಗೆ ಸೇರಿದ 30–40ಟಟ ಗಾತ್ರಕ್ಕೆ ಬೆಳೆಯುವ ಸಮುದ್ರ ಜೀವಿ. ಸಾಮಾನ್ಯವಾಗಿ ಬಂಡೆಗಳಿಗೆ ಅಂಟಿಕೊಂಡು ಅಥವಾ ಸಾಗರದಾಳದಲ್ಲಿ ಕಂಡುಬರುವ ಇವು, ಸಣ್ಣ ಗೂಡುಗಳನ್ನು ಕಟ್ಟಿಕೊಂಡು ಅದರೊಳಗೆ ವಾಸವಾಗಿರುತ್ತವೆ. ಇವುಗಳು ಒಂದೊಂದಾಗಿ ಇರದೆ, ಅಸಂಖ್ಯಾತ ಸಂಖ್ಯೆಯಲ್ಲಿ ವಿಸ್ತಾರವಾಗಿ ಹಬ್ಬಿಕೊಂಡು ಮರಳಿನ ಮನೆಗಳನ್ನು ಕಟ್ಟಿಕೊಳ್ಳುತ್ತವೆ. ದೂರದಿಂದ ನೋಡಿದರೆ, ಬಂಡೆಗಳಿಗೆ ತೆಳುವಾದ ಮರಳಿನ ಹೊದಿಕೆ ಹಾಕಿದಂತೆ ಕಂಡರೂ, ಬಳಿ ಹೋಗಿ ನೋಡಿದರೆ ಇವುಗಳ ಸಂಕೀರ್ಣ ಜೀವ ವ್ಯವಸ್ಥೆ ಕಂಡುಬರುತ್ತದೆ. ಈ ಹುಳಗಳು ವಿವಿಧ ಗಾತ್ರದ ಮರಳಿನ ಕಣಗಳನ್ನು, ಸೂಕ್ಷ್ಮ ಚಿಪ್ಪುಗಳನ್ನು ತನ್ನ ವಿಶೇಷ ಅಂಟು ಸ್ರವಿಕೆಯ ಸಹಾಯದಿಂದ ಜೋಡಿಸಿಕೊಂಡು ಕೊಳವೆಯಾಕೃತಿಯಲ್ಲಿ ಗೂಡುಗಳನ್ನು ಕಟ್ಟಿಕೊಳ್ಳುತ್ತವೆ. ಪ್ರತಿಯೊಂದು ಗೂಡು ನೆರೆಯ ಗೂಡುಗಳೊಂದಿಗೆ ಗಟ್ಟಿಯಾಗಿ ಅಂಟಿಕೊಂಡು ಸಹಸ್ರಾರು ಸಂಖ್ಯೆಯಲ್ಲಿರುತವೆ.

4ನೇ ಪುಟದಲ್ಲಿ ಮುಂದುವರಿಯುವುದು

## ನಿಸ್ಸಂದೇಹ ಸ್ನೇಹದಿಂದ

ಚಂದದೊಂದು ಸ್ನೇಹಕೆ
ಮಿಡಿಯುತಿದೆ ಮನ
ಅಂದದೊಂದು ಬಂಧವನರಿಸಿದ
ಹೃದಯವೀಗ ಸಂಪನ್ನ

ಗಿಜುಗಾಟದಲ್ಲೆಲ್ಲವೂ
ಆಗಿತ್ತು ದಾರುಣ ಗೌಣ
ಒಲ್ಲದ ಕಾರಣಕೆ
ಸಾಕ್ಷಿಯಂತಿತ್ತು ಮೌನ



ಸದಾ ಸಂಪನ್ನತೆಯಿಂ
ಬೀರುತಿರು ಕಡಕ್ ನೋಟವನ್ನ
ಸಂತೃಪ್ತಿಯ ಉಸಿರಂತೆ
ಹಸಿರಾಗಲಿ ನಿನ್ನ ಜೀವನ

ನಿಸ್ಸಂದೇಹ ಸ್ನೇಹದಿಂದ
ಅನರ್ಘ್ಯ....

✍ ಮಾಗಿದ ಮನಸ್ಸು



ಸಂಪಾದಕೀಯ

ರೇಮಂಡ್ ಡಿಕುನಾ ತಾಕೊಡೆ

# ರೈತರಲ್ಲಿಯೇ ಭೂಮಿ ಉಳಿಸಿಕೊಳ್ಳಿ ಯವಜನರೇ



ಒದ್ದಾಟಗಳು ಇರುವಾಗ ಯಾವುದೇ ಅಮಿಷಗಳು ಸುಲಭವಾಗಿ ತಲುಪಿಸಬಹುದು ಎಂಬ ಲೆಕ್ಕಾಚಾರ ಮಾಡುವ ಹಣವಂತರು ಬೇರೆ ಬೇರೆ ಲೆಕ್ಕಾಚಾರ ಮಾಡಿ ಬೇಳೆ ಬೇಯಿಸುವುದು ಸಾಮಾನ್ಯವಾಗಿ ನೋಡುತ್ತೇವೆ.

ನಾವು ಸಣ್ಣವರಿದ್ದಾಗ ಈಗಿನ ಹಾಗೆ ಆಹಾರ ಇರಲಿಲ್ಲ. ಕಾರಣ ಕೆಲವೇ ಜನರು ಆಸ್ತಿಯನ್ನು ತನ್ನ ಮುಷ್ಟಿ ಒಳಗೆ ಇಟ್ಟು ಮಡರೆಯುವ ಪರಿಪಾಠವು ಇತ್ತು.

ಭಾರತಕ್ಕೆ ಇಂದಿರಾಗಾಂಧಿ ಎನ್ನುವ ದಿಟ್ಟ ಮಹಿಳೆ ಪ್ರಧಾನಿ ಆದಾಗ ಸಂವಿಧಾನದ ಆಶಯವನ್ನು ಅರಿತು ಸಾಮಾಜಿಕ ಆರ್ಥಿಕ ವ್ಯವಸ್ಥೆ ಇಂದೇ ಸಮಾನವಾಗಿ ಆಗಲು ಭೂಮಸೂದೆ ಎಂಬ ಕಾನೂನು ತಂದರು.

ಸುಮಾರು ಐವತ್ತು ವರ್ಷಗಳ ನಂತರ ಮತ್ತೆ ಭೂಮಿ ಬಡವರ, ರೈತರ ಕೈಯಿಂದ ಧನಿಕ ರೈತರಿಗೆ ಅಥವಾ ಉದ್ದಿಮೆಯ ನಿಯಂತ್ರಣವು ಇದ್ದವರಿಗೆ ಪರಭಾರೆ ಆಗುವುದು ಕಾಣುತ್ತೇವೆ.

ಭೂಮಿಯ ಒಡೆತನ ಬಂದಾಗ ಆಗುವ ಸುಖದ ಲಕ್ಷಣಗಳು ಹಲವಾರು.

ಸ್ವಂತದ ತುಂಡು ಭೂಮಿ ಬಿಟ್ಟು ಬದಲಿಗೆ ಸಮ್ಮಿಶ್ರ ಜೊತೆ ಭೂಮಿ ಮತ್ತು ಬಹುಮಹಡಿ ಕಟ್ಟಡದ ಮನೆಯ ಸುಖದ ಲೋಲುಪತೆಯ ಬಂಧನಕ್ಕೆ ನಮ್ಮ ಉದ್ದಿಮೆಯ ಜನರು ಆಕರ್ಷಣೆ ಮಾಡಿ ಆಗಿದೆ.

ಪರಿಣಾಮವಾಗಿ ಎಲ್ಲಾ ಕಡೆಯಲ್ಲಿ ಬಹುಮಹಡಿ ಕಟ್ಟಡಗಳ ಚೆಂದದ ಸಾಲುಗಳು ನೋಡಬಹುದು.

ಉದ್ದಿಮೆಗಳು ನಮಗೆ ವಿಷಪ್ರಾಷನ ಸುಂದರ ಜಾಹಿರಾತಿನ ಮೂಲಕ ಮಾಡಿದಾಗ ನಾವು ಆಡಿಯೋ ವಿಶುವಲ್ ಎಫೆಕ್ಟ್ ನೋಡಿ ಸುಲಭವಾಗಿ ಆಕರ್ಷಣೆ ಆಗಿ ನಮ್ಮ ಎಲ್ಲಾವೂ ಒಡ್ಡಿ ಹಾಯೆನಿಸುವುದೇ ಗುಲಾಮಗಿರಿ ವ್ಯವಸ್ಥೆಯ ಮೊದಲ ನಮ್ಮ ಹೆಜ್ಜೆ ಆಳುತ್ತದೆ.

ಭೂಮಿಯನ್ನು ಮಾರುವ ಮೊದಲು ರೈತರು ಎಚ್ಚರಿಕೆಯಿಂದ ತನಗಿರುವ ನೂರಾರು ಸಾಧ್ಯತೆಗಳು ಪರಾಂಭರಿಸಿ ಪರಾವಲಂಬಿ ಜೀವಿಗಳು ಆಗದಂತೆ ನೋಡಬೇಕು. ಪರಾವಲಂಬಿ ಜೀವನ ರೈತರದು ಅಲ್ಲ. ರೈತರು ಮಣ್ಣು ಹದಾಮಾಡಿ ಬೆವರು ರಸಗೊಬ್ಬರ ಮಾಡಿ ಕೈಬೆರಳುಗಳು ಕೀಟನಾಶಕ ಮಾಡಿ ಶುದ್ಧ ಸ್ವಚ್ಛ ಹಾಗೂ ಸ್ವಚ್ಛಂದ ಜೀವನ ಮಾಡುವವರು.ಹಂಗಿನ ಅನ್ನವಾಗಲಿ,ಬೆವರಿಳಿಯದ ಆಹಾರದ ರುಚಿಯನ್ನು ತಿಳಿಯದವರು.

ಭೂಮಿಯ ತುಂಡುಗಳು ರೈತರ ಹಕ್ಕು ಉದ್ದಿಮೆಯ ಪಾಲಾಗದಂತೆ ಸುಶಿಕ್ಷಿತ ಯುವಜನರು ಸಂಯಮದ ನಡೆಮಾಡಿ ಮುಂದೆ ನಡೆಯಬೇಕು.

ಸರ್ಕಾರದ ಹೊಣೆಗಾರಿಕೆ ಇದರಲ್ಲಿ ಇದೆ. ಶಿಕ್ಷಣವನ್ನು ಪೂರೈಸಿದ ಯುವಜನರು ಊರಿನ ಕೆಲಸ ಮಾಡಲು ಹೆತ್ತವರು ಪ್ರಚೋದನೆ ಆಗಲೀ ಪ್ರೋತ್ಸಾಹ ನೀಡುವ ಕೆಲಸ ಮಾಡುವುದು ನಿಂತಿದೆ. ಕಾರಣ ಸರಕಾರದ ಗ್ರಾಮೀಣ ನಿರ್ಲಕ್ಷ್ಯ. ಪ್ರತಿಯೊಂದು ರಾಷ್ಟ್ರವೂ ತನ್ನ ಅನ್ನದಾತರಿಗೆ ಕೊಡುವ ಗೌರವ ನಮ್ಮ ಜನರಿಗೆ ನೀಡುವ ಮೂಲಕ ನಾವು ಯುವಜನರು ತಮ್ಮ ಶಿಕ್ಷಣದ ಜೊತೆಯಲ್ಲಿ ಗ್ರಾಮದಲ್ಲಿ ಉಳಿಯುವ ಸಹಕಾರ ಮತ್ತು ಸಂವೇದನೆ ಹೊಂದಬಹುದು. ಹೆಣ್ಣುಮಕ್ಕಳು ಗ್ರಾಮದಲ್ಲಿ ಉಳಿಯುವ ಸಾಹಸ ಮಾಡುವವರು ಕಡಿಮೆ ಆತದೆ. ಅದಕ್ಕೇ ಸಕಲ ವಿಧದ ಸವಲತ್ತುಗಳನ್ನು ಗ್ರಾಮೀಣ ಭಾಗಕ್ಕೂ ಕೊಟ್ಟು ಸಹಜ ಪೇಟೆಯ ಎಲ್ಲಾ ರೀತಿಯ ಸುಖದ ಸೌಲಭ್ಯಗಳು ಗ್ರಾಮದಲ್ಲಿ ಇರುವ ಬಗ್ಗೆ ಧೃಡ ಮಾಡಬೇಕು.

ಗ್ರಾಮದಲ್ಲಿ ಮೌಲ್ಯವರ್ಧಿತ ಉತ್ಪಾದನೆ ಮಾಡಲು ಸಕಲ ವ್ಯವಸ್ಥೆಯನ್ನು ಮಾಡಿದರೆ ಮತ್ತು ಇದಕ್ಕೆ ಬೇಕಾಗುವ ನಿರಂತರ ವಿದ್ಯುತ್, ತಡೆರಹಿತ ರಸ್ತೆಗಳು, ನೀರಿನ ಸೌಕರ್ಯ ಮತ್ತು ಸರಿಯಾದ ಉತ್ಪಾದನೆಗೆ ದರವನ್ನು ನೀಡಿದರೆ ಆಕರ್ಷಣೆ ಆಗಬಹುದು.

ಪೇಟೆಗೆ ಓಡಿದವರು ಸುಖವನ್ನು ಪಡೆಯುವಾಗ "ತಾವೇಕೆ ಸುಖ ಪಡಬಾರದೆಂದು?" ಎಂಬ ಆಲೋಚನೆಯೇ ಯುವಜನರನ್ನು ಪೇಟೆಕಡೆಗೆ ಹೆಜ್ಜೆ ಹಾಕುವುದಕ್ಕೆ ಕಾರಣ ಮಾಡಿದೆ.

ಮೂಲಭೂತ ಸೌಕರ್ಯಗಳ ಜೊತೆಗೆ ಸುಂದರ ಪೇಟೆಯ ಸೌಲಭ್ಯಗಳನ್ನು ಗ್ರಾಮದಲ್ಲಿ ನೋಡಿದರೆ ಎಲ್ಲಾರೂ ತಮ್ಮ ಊರಿಗೆನೇ ವರ ಆಗಬಹುದು■

Visit Our Webiste: www.pingara.com

# ಪತಿ ಪತ್ನಿ ಸುತಾಲಯ:22

## ಪ್ರೀತಿ ಮಾತ್ರಾ ಸಾಕೇ?

ರೆ. ಥಿಯೋಲೋಜಿಯನ್

ಪ್ರೀತಿ ಹೇಗಿದ್ದರೂ ಚೆನ್ನ ಎಂಬ ಮಾತು ಸುಳ್ಳು. ಯಾಕೆಂದರೆ ಪ್ರೀತಿಯ ಜೊತೆಗೆ ಬರುವ ಈರ್ಶೆ, ತಾನೇ ಅನುಭವಿಸಬೇಕು ಎನ್ನುವ ಒತ್ತಾಸೆ ನಿಜವಾದ ಪ್ರೀತಿಯ ವೈರಿಗಳು ಆಗುವ ಸಾಧ್ಯತೆ ಇದೆ.

ನಿಷ್ಕಲ್ಮಶ ಪ್ರೀತಿ ಏನನ್ನೂ ಬಯಸುವುದಿಲ್ಲ ಎಂದು ಸುಳ್ಳು ಹರಡಿ ಬಿಡುವ ಬುರುಡೆ ಪ್ರೇಯರು ತ್ಯಾಗದ ಮೇಲೆಯೇ ಭಾರ ಹಾಕಿ ಬಿಡುತ್ತಾರೆ.

ಇದರ ಜೊತೆಯಲ್ಲಿ ಪ್ರೀತಿಯನ್ನು ಮಾಡುವ ಮಂದಿ ಅದರ ಸುಖದ ಮೇಲೆಯೇ ಕಣ್ಣಿಟ್ಟು ತ್ಯಾಗದ ಮೇಲ್ಗಡೆ ಪರದೆ ಎಳೆದು ಬಿಟ್ಟಿದ್ದಾರೆ.

ಜನರು ಸುಖದ ದಾರಿಯಲ್ಲಿ ಬಹಳ ದೂರ ಸಾಗಿಯಾಗಿದೆ. ಇನ್ನೂ ಈ ಏಕಮುಖ ರಸ್ತೆಯಲ್ಲಿ ಹಿಂದೆ ಬರುವ ಹಾಗಿಲ್ಲ ಅಷ್ಟು ದೂರ ಸಾಗಿದ ಯಾರೂ ಹಿಂದೆ ಬರಲು ಆಗುತ್ತಿಲ್ಲ ಎಂದು ಭಾವನೆ ಬರುವುದು ಸಹಜ.

ಆದರೆ ಅದು ಹಾಗಲ್ಲ ಕಥೆ.

ಯಾರಿಗೂ ಸುಖದ ಆಸೆಯ ಅಮಿಷ ಎಷ್ಟು ಅಡರಿದೆ ಅಂದರೆ ಸುಖ ಆದರೆ ಮಾತ್ರ ಇಲ್ಲವಾದರೆ ಬೇಡ ಅಂದುಬಿಟ್ಟಿದೆ. ಕಾರಣ ಮಾನಸಿಕಸ್ಥಿತಿಗಳು.

ಕಷ್ಟ ಪಟ್ಟು ಯಾಕೆ ಇದ್ದ ಸುಖ ಕಳಕೊಳ್ಳಬೇಕು.

ನಾವು ಪ್ರೀತಿ ಅಂದರೆ ಬಹುಮುಖ ಎಂದು ನಡೆದರೆ ಆ ಮುಖಗಳು ಸಾಕಾರಾ ಮಾಡಲು ಕಷ್ಟ ಸುಖದ ಸಮಾನತೆ ಆಲೋಚಿಸಲು ಸಾಧ್ಯತೆಯನ್ನು ಮಾಡಬಹುದು.

ಸ್ವ ಸುಖದತ್ತ ಮುಖ ಮಾಡಿ ಯಾವುದೇ ರೀತಿಯ ಇತರ ಗೋಜಿಗೆ ಹೋಗದೇ ಅರೆ ಹುಚ್ಚು ಅನಿಸಿತು.

ತನ್ನ ಜೊತೆಯಲ್ಲಿ ತಾನು ಮಾತ್ರ ಇರುವ ಸ್ವಗತ ಜನರು ನಿರ್ಲಿಪ್ತರು.ಆದರೆ ಸಂಗಜೀವಿಗಳು ಹಾಗಲ್ಲದೆ ತನ್ನ ಜತೆ ಒಂದೇ ಮಂಚವನ್ನು ಹಂಚಿಕೊಳ್ಳಲು ತಯಾರಾದಾಗ ಅಯಾಚಿತ ನಿದ್ರೆಯಲ್ಲಿ ಒದೆಗಳಿಗೆ ತಕರಾರು ಮಾಡುವಂತಿಲ್ಲ.

ಜೊತೆಯಲ್ಲಿ ಬಾಳುವುದು ಶೇಕಡಾ ಐವತ್ತು ಪಾಲುದಾರಿಕೆ ಆದರೂ ಕುಟುಂಬದ ಲಕ್ಷಣಗಳು ನಲ್ವತ್ತೊಂಬತ್ತು ಐವತ್ತೊಂದೂ ಸರಿ ಹೌದು.

ದ್ವಿಪಥ ಮಾರ್ಗಕ್ಕೆ ಎರಡೂ ವಾಹನಗಳು ಹೋಗುವ ಸ್ಥಳವು ಇದ್ದರೂ ಒಂಚೂರಾ ದರೂ ಜರುಗುವುದು ವಾಡಿಕೆ ಕೂಡಾ.

ಹಾಗೇ ಜೀವನದ ಜೊತೆಯಲ್ಲಿ ಸಾಗುವ ದಿನಗಳಲ್ಲಿ ಜೊತೆಗೆ ಇರುವವರಿಗೆ ಸ್ವಲ್ಪಮಟ್ಟಿಗೆ ಜಾಗ ಬಿಡುವುದು ಅದು ಹಾಗೆ ಮಾಡಿದ್ದು ಕಾಣಬೇಕು.

ಇದು ಅರಿತು ಬಾಳಿದರೆ ಸ್ವರ್ಗ ಸುಖ ಅಂತೀವೆಯಲ್ಲಾ ಅದು ಆಗಿದೆ.

ದೇಹದ ಆಕರ್ಷಣೆ ಮಾತ್ರವೇ ಪ್ರೀತಿ ಎಂಬ ಆಶಯವನ್ನು ಬಿಡಬೇಕು. ಅದೂ ಒಂದು ಅಂಶ ಎನ್ನುವುದು ಸರಿ. ಆದರೆ ದೇಹದ ಆಕರ್ಷಣೆ ಮಾತ್ರದಿಂದ ಆದ ಪ್ರೀತಿಯ ಭವಿಷ್ಯವು ಸರಿಯಾದ ದೂರವನ್ನು ಕ್ರಮಿಸುತ್ತದೆ ಎಂದು ಧೈರ್ಯ ಹೇಳಲಾಗದು. ಕಾರಣ ಅಮಿಷಗಳಿಂದ ಪ್ರೀತಿಯ ಬಾಳಿಕೆ ಅಲ್ಲ.ನಿಷ್ಕಲ್ಮಶ ಆದಷ್ಟೂ ಒಳ್ಳೆಯದು.

ಕೊಡು ಕೊಳ್ಳುವಿಕೆಯ ಶಕ್ತಿಯಲ್ಲಿ ತ್ಯಾಗದ ಕೊಡುಗೆ ಅಧಿಕ ಆದರೂ ಇಲ್ಲವಾದರೂ ನಿಯತ್ತಿನ ಕೊಡುಗೆಯಂತೂ ಬೇಕೇ ಬೇಕು.

ಒಬ್ಬರು ಇನ್ನೊಬ್ಬರಿಗೆ ಸ್ವಲ್ಪಮಟ್ಟಿಗೆ ವುನಾಕಾರಣ ಹೊಗಳಿದರೂ ಲಾಭವಾದೀತು.

ನವಿರಾಗಿ ಇದ್ದಷ್ಟೂ ಉಲ್ಲಾಸ ಭರಿತ ಇರುವುದು ಖಂಡಿತಾ■

## ಮೆದುಳಿಗೊಂದು ಟಾನಿಕ್



*ಮಂಗಳೂರಿನ ಬೀಚುಗಳಲ್ಲಿ ಕಡಲು ಹಿಂದಿನಂತಿಲ್ಲದೆ ತೀವ್ರವಾಗಿದೆ ಎಂದರು ಹಿರಿಯ ಮರಕಾಲ ನಾಯಕರೊಬ್ಬರು.

*ಕಡಲ ಅಬ್ಬರದಿಂದ ಈಗ ಮೀನುಗಾರಿಕೆ ಕಷ್ಟವಾಗಿದೆ ಎಂದು ಮಲ್ಪೆಯಲ್ಲಿ ಮೀನು ಹಿಡಿಯುವವರೊಬ್ಬರು ಹೇಳಿದರು.


*ಮುಂಬಯಿ ಕಡಲ ಬದಿಯ ಕೊಳಚೆ ಪ್ರದೇಶ ಗಣೇಶ ನಗರ ಈಗ ಕಡಲ ನೀರಿಗೆ ಬೀಳುತ್ತಿದೆ.

*ಗುಜರಾತಿನ ದ್ವಾರಕದಿಂದ 285 ಕಿಮೀ ದೂರ ಕಡಲಲ್ಲಿ ವಾಯುಭಾರ ಕುಸಿತ ಉಂಟಾಗಿ ಜೂನ್ 24ರಂದು 180 ಕಿಮೀ ವೇಗದ ಗಾಳಿ ಬೀಸುತ್ತಿದೆ.

*1995ರ ಬಳಿಕ ಅರೇಬಿಯಾ ಸಮುದ್ರವು ತನ್ನ ಮೂಲ ಸ್ವರೂಪ ಬದಲಾಯಿಸುತ್ತ ಬರುತ್ತಿದೆ.

*ಹೆಚ್ಚು ಬಲದ ಸೈಕ್ಲೋನ್‌ಗಳು, ಬಿಸಿ ಚಳಿಗಾಲ, ಹೆಚ್ಚಿದ ಶಾಖ ಸೆಕೆ, ಕಡಿಮೆಯಾದ ದಶಕದ ಮುಂಗಾರು ಮಳೆ, ಕುಗ್ಗಿದ ಹಸಿರು (ಕೃಷಿ) ಹಾಸು.

*ಭೂಬಿಸಿ ಇಲ್ಲಿ ಸ್ಪಷ್ಟವಿದೆ■


ಪ್ರತಿಗಳಿಗಾಗಿ ವಿಳಾಸದೊಂದಿಗೆ ರೂ.100

ಈ ನಂಬ್ರಕ್ಕೆ 9964126531 ಗೂಗಲ್ ಪೆ/ಫೋನ್ ಪೆ

ಮಾಡಿ ಪ್ರತಿಯನ್ನು ನಿಮ್ಮ ಮನೆಗೆ ತರಿಸಿಕೊಳ್ಳಬಹುದು

## ಮಂಗಳೂರು ಪ್ರೆಸ್ ಕ್ಲಬ್ ದಿನಾಚರಣೆ

ಸೂಕ್ಷ್ಮ ಸಂವೇದನಾಶೀಲ ಬೆಳೆಸಿಕೊಂಡು ಟೀಕೆ, ಟಿಪ್ಪಣಿ ಎದುರಿಸಿ ನಿರ್ಭೀತಿಯಿಂದ ಕೆಲಸ ಮಾಡಬೇಕಾದುದು ಪತ್ರಕರ್ತರ ಧರ್ಮ. ಸಮಾಜದ ಆರೋಗ್ಯ ಕಾಪಾಡುವ ಜವಾಬ್ದಾರಿ ಕೂಡ ಪತ್ರಕರ್ತರದ್ದಾಗಿದೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಕೆ.ಸದಾಶಿವ ಶೆಣೈ ಹೇಳಿದರು.

ಬೋಳೂರಿನ ಪ್ಯಾರಡೈಸ್ ಐಲ್ಯಾಂಡ್‌ನಲ್ಲಿ ಭಾನುವಾರ ಮಂಗಳೂರು ಪ್ರೆಸ್ ಕ್ಲಬ್, ದ.ಕ.ಜಿಲ್ಲಾ




ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಪತ್ರಿಕಾ ಭವನ ಟ್ರಸ್ಟ್ ಆಶ್ರಯದಲ್ಲಿ ನಡೆದ ಪ್ರೆಸ್ ಕ್ಲಬ್ ದಿನಾಚ ರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಬೀದಿ ನಾಯಿಗಳಿಗೆ ಅನ್ನಾಹಾರ ಹಾಕಿ ಪೋಷಿಸುತ್ತಿರುವ ಮಂಗಳೂರಿನ ರಜನಿ ಶೆಟ್ಟಿ ಅವರಿಗೆ 2022ರ ಸಾಲಿನ ಪ್ರೆಸ್‌ಕ್ಲಬ್ ಪ್ರಶಸ್ತಿ ನೀಡಿ ಗೌರವಿಸ'ಲಾಯಿತು.

ಹಿರಿಯ ಪತ್ರಕರ್ತರಿಗೆ ಗೌರವ: ಹಿರಿಯ ಪತ್ರಕರ್ತರಾದ ಜಿನ್ನಪ್ಪ ಗೌಡ, ರಾಮಕೃಷ್ಣ ಆರ್., ಐ.ಬಿ.ಸಂದೀಪ್ ಕುಮಾರ್, ಕೆ.ಟಿ.ವಿನೋಬ, ಪ್ರಕಾಶ್ ಇಳಂತಿಲ, ಪುಷ್ಪರಾಜ್ ಬಿ.ಎನ್, ರಾಮಕೃಷ್ಣ ಭಟ್, ಇಬ್ರಾಹಿಂ ಅಡ್ಕಸ್ಥಳ, ರವೀಂದ್ರ ಶೆಟ್ಟಿ ಅವರಿಗೆ ಪ್ರೆಸ್ ಕ್ಲಬ್ ಗೌರವ ಪುರಸ್ಕಾರ ನೀಡಲಾಯಿತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ರವಿರಾಜ್ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಿದರು.

ಪ್ರೆಸ್‌ಕ್ಲಬ್ ಅಧ್ಯಕ್ಷ ಅನ್ನು ಮಂಗಳೂರು ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಆನಂದ ಶೆಟ್ಟಿ, ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಅಧ್ಯಕ್ಷ ಶ್ರೀನಿವಾಸ ನಾಯಕ್ ಇಂದಾಜೆ, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟ ಸದಸ್ಯ ಪಿ.ಬಿ.ಹರೀಶ್ ರೈ, ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯ ಜಗನ್ನಾಥ ಶೆಟ್ಟಿ ಬಾಳ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯ ಇಬ್ರಾಹಿಂ ಅಡ್ಕಸ್ಥಳ, ಪತ್ರಿಕಾ ಭವನ ಟ್ರಸ್ಟ್ ಆಧ್ಯಕ್ಷ ರಾಮಕೃಷ್ಣ ಆರ್. ಉಪಸ್ಥಿತರಿದ್ದರು.

## ತವರಿನಲ್ಲಿ ಸಾನಿಯಾಗೆ ವಿದಾಯ

ಕಳೆದ ತಿಂಗಳು ಭಾರತದ ಟೆನ್ನಿಸ್ ಮಹಿಳಾ ಪ್ರತಿಭೆ ದುಬಾಯಿ ಓಪನ್‌ನಲ್ಲಿ ಆಡಿ ಅಂತರರಾಷ್ಟ್ರೀಯ ಟೆನ್ನಿಸ್‌ಗೆ ವಿದಾಯ ಹೇಳಿದ್ದರು. ಮಾರ್ಚ್ 5ರಂದು ತವರೂರಿನ ಅಭಿಮಾನಿಗಳು ವಿದಾಯ ಪ್ರದರ್ಶನ ಪಂದ್ಯ ಏರ್ಪಡಿಸಿದ್ದರು.



ಸಾನಿಯಾರಿಗೆ ರೋಹನ್ ಬೋಪಣ್ಣ, ಕ್ರೊಯೇಶಿಯಾದ ಇವಾನ್ ಡೋಡಿಗ್, ಯುಎಸ್‌ಎಯ ಬೆಥನಿ ಮ್ಯಾಟಿಕ್ ಜೊತೆಯಾದರು. ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು, ತೆಲಂಗಾಣ ಮಂತ್ರಿ ಕೆ. ಟಿ. ರಾಮರಾವ್, ಮಾಜೀ ಕ್ರಿಕೆಟಿಗರಾದ ಮೊಹಮ್ಮದ್ ಅಜರುದ್ದೀನ್, ಯುವ ರಾಜ ಸಿಂಗ್ ಮೊದಲಾದವರು ಪಂದ್ಯ ವೀಕ್ಷಿಸಿದರು.

ಅಂತಿಮವಾಗಿ ಎಲ್ಲರೂ ಚಪ್ಪಾಳೆ ತಟ್ಟಿ ವಿದಾಯ ಹೇಳಿದರು. ಪ್ರತಿ ಕ್ರೀಡಾಪಟುಗಳಿಗೂ ದೇಶದ ಪರ ಆಡಲು ಸಿಗುವುದು ಹೆಮ್ಮೆ. ಎರಡು ದಶಕ ಆ ಅವಕಾಶ ಪಡೆದ ಧನ್ಯತೆ ನನ್ನದು. ಎರಡು ದಶಕಗಳ ಹಿಂದೆ ಸಾನಿಯಾ ಮಿರ್ಜಾ ಹೈದರಾಬಾದಿನಲ್ಲೇ ಮೊದಲ ಡಬ್ಲ್ಯುಟಿಎ ಟ್ರೋಫಿ ಗೆದ್ದಿದ್ದರು.

## ದೆಹಲಿಯ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ತಜ್ಞ ಸಮಾಲೋಚನೆಗೆ ಸಹ್ಯಾದ್ರಿಯ ಡಾ. ವಿಶಾಲ್ ಸಮರ್ಥ ಮತ್ತು ಪ್ರೊ. ಪದ್ಮನಾಭ ಬಿ. ಆಯ್ಕೆ

ದೆಹಲಿಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಾರ್ಚ್ 7ರಂದು ನಡೆಯುವ ತಜ್ಞ ಸಮಾಲೋಚನೆಗೆ ಸಂಪನ್ಮೂಲ ವ್ಯಕ್ತಿಗಳಾಗಿ ನಗರದ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮೆನೇಜ್ಮೆಂಟ್ ನಿಂದ ಡಾ. ವಿಶಾಲ್ ಸಮರ್ಥ ಮತ್ತು ಪ್ರೊ. ಪದ್ಮನಾಭ ಬಿ. ಆಯ್ಕೆಯಾಗಿದ್ದಾರೆ.





ಸಚಿವಾಲಯದ ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನ ವಿಭಾಗದಿಂದ ನಡೆಯುವ ಈ ಕಾರ್ಯಕ್ರಮದಲ್ಲಿ ಡಿಜಿಟಲ್ ಆಲ್: ಲಿಂಗ ಸಮಾನತೆ ಯಲ್ಲಿ ಆವಿಷ್ಕಾರ ಮತ್ತು ತಂತ್ರಜ್ಞಾನ ಎಂಬ ವಿಷಯದ ಕುರಿತು ಇವರು ವಿಚಾರ ಮಂಡಿಸಲಿದ್ದಾರೆ.

ದೇಶದ ವಿವಿಧ ಸಂಘ ಸಂಸ್ಥೆಗಳಿಂದ ಹಲವಾರು ತಜ್ಞರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಲಿದ್ದಾರೆ. ಡಾ. ವಿಶಾಲ್ ಸಮರ್ಥ ಮತ್ತು ಪ್ರೊ. ಪದ್ಮನಾಭ ಬಿ. ಇವರು ಕೇಂದ್ರ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನ ವಿಭಾಗದ ಅನುದಾನದಿಂದ ನಡೆಯುವ ಕಾರ್ಯಯೋಜನೆಯ ಪ್ರಧಾನ ಸಂಶೋಧಕಿ ಹಾಗೂ ಉಪ ಪ್ರಧಾನ ಸಂಶೋಧಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಕಾರ್ಯ ಯೋಜನೆಯಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಸುಮಾರು 165 ಮಹಿಳೆಯರು ವಿದ್ಯುತ್ ಮಗ್ಗ ತರಬೇತಿಯನ್ನು ನುರಿತ ತರಬೇತುಧಾರರಿಂದ ತರಬೇತಿ ಪಡೆದು ಸ್ವಂತ ಉದ್ದಿಮೆ ಆರಂಭಿಸಲಿದ್ದಾರೆ.

## ಜೂನಿಯರ್ ಎನ್‌ಟಿಆರ್ 30ನೇ ಚಿತ್ರಕ್ಕೆ ಜಾನ್ವಿ ಕಪೂರ್ ನಾಯಕಿ

ಅವಕಾಶ ಅಂದ್ರೆ ಸಣ್ಣ-ಪುಟ್ಟ ಚಾನ್ಸ್ ಅಲ್ಲ. ಜೂ.ಎನ್‌ಟಿಆರ್ (Jr NTR) ಜೊತೆ ನಟಿಸುವ ಅವಕಾಶ ಜಾನ್ವಿ ಕಪೂರ್‌ಗೆ ಸಿಕ್ಕಿದೆ. ಈ ಬಗ್ಗೆ ಸ್ವತಃ ಅವರ ಕಡೆಯಿಂದ ಅಧಿಕೃತ ಮಾಹಿತಿ ಹೊರಬಿದ್ದಿದೆ. ಜೂನಿಯರ್ ಎನ್‌ಟಿಆರ್ ನಟನೆಯ 30ನೇ (NTR 30) ಸಿನಿಮಾಗೆ ಜಾನ್ವಿ ಕಪೂರ್ ಅವರು ಹೀರೋಯಿನ್ ಆಗಿ ಆಯ್ಕೆ ಆಗಿದ್ದಾರೆ. ಅವರ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆ ಆಗಿದೆ. ಆ ಮೂಲಕ ಅಭಿಮಾನಿಗಳಿಗೆ ಜಾನ್ವಿ ಕಪೂರ್ ಖುಷಿ ಸುದ್ದಿ ನೀಡಿದ್ದಾರೆ.






ಜೂನಿಯರ್ ಎನ್‌ಟಿಆರ್ ಅಭಿನಯದ ಈ ಹೊಸ ಸಿನಿಮಾಗೆ ಇನ್ನೂ ಶೀರ್ಷಿಕೆ ಅಂತಿಮವಾಗಿಲ್ಲ. ಸದ್ಯಕ್ಕೆ 'ಎನ್‌ಟಿಆರ್ 30' ಎಂದು ಕರೆಯಲಾಗುತ್ತಿದೆ.

'ಎನ್‌ಟಿಆರ್ 30' ಚಿತ್ರದ ಮೂಲಕ ಜಾನ್ವಿ ಕಪೂರ್ ಅವರು ದಕ್ಷಿಣ ಭಾರತಕ್ಕೆ ಕಾಲಿಟ್ಟಂತೆ ಆಗಲಿದೆ. ಅವರ ಪಾತ್ರದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಫ್ಯಾನ್ಸ್ ಕಾದಿದ್ದಾರೆ.

ಜಾನ್ವಿ ಕಪೂರ್ ಅವರು ಫಸ್ಟ್ ಲುಕ್ ಪೋಸ್ಟರ್ ಹಂಚಿಕೊಂಡಿದ್ದಾರೆ. ಇದಲ್ಲದೇ, 'ಬವಾಲ್' ಹಾಗೂ 'ಮಿಸ್ಟರ್ ಆಯಂಡ್ ಮಿಸಸ್ ಮಾಹಿ' ಚಿತ್ರಗಳಲ್ಲೂ ಜಾನ್ವಿ ಕಪೂರ್ ನಟಿಸುತ್ತಿದ್ದಾರೆ.

## ಪುನರೂರಿನಲ್ಲಿ 13ನೇ ಅಖಿಲ ಕರ್ನಾಟಕ ಬೆಳದಿಂಗಳ ಸಾಹಿತ್ಯ ಸಮ್ಮೇಳನ

85ರ ಪ್ರಾಯದಲ್ಲೂ ಮೇಳದ ತಿರುಗಾಟ ನಡೆಸುತ್ತಿರುವ ಅರುವ ಕೊರಗಪ್ಪ ಶೆಟ್ಟಿ ಅಧ್ಯಕ್ಷತೆಯಲ್ಲಿ, ಹರಿಕೃಷ್ಣ ಪುನರೂರು ಪೋಷಕತ್ವದಲ್ಲಿ, ಶೇಖರ ಅಜೆಕಾರು ಕಣ್ಣೋಟದ 13ನೇ ಅಖಿಲ ಕರ್ನಾಟಕ ಬೆಳದಿಂಗಳ ಸಾಹಿತ್ಯ ಸಮ್ಮೇಳನವು ಪುನ ರೂರು ವಿಶ್ವನಾಥಾಲಯದ ಹಾಲ್‌ನಲ್ಲಿ ಮೊನ್ನೆ ಹುಣ್ಣಿಮೆಯಂದು ನಡೆಯಿತು.




ಮೊದಲು ಮೆರವಣಿಗೆ, ಸಂಜೆ ನಡೆದ ರಾಜ್ಯ ಮಟ್ಟದ ಮಕ್ಕಳ ಪ್ರತಿಭೋತ್ಸವದಲ್ಲಿ ಮಕ್ಕಳದೇ ದರಬಾರು ಮತ್ತು ಮಕ್ಕಳಿಗೆ ಸನ್ಮಾನ. ಅಂಶು ಸಂಹಿತ್, ಸುನಿಧಿ, ಶ್ರೇಯಾ, ಪ್ರಾಪ್ತಿ, ಕಶ್ಯಪ್, ಸಪ್ನ ಎಂದು ಮಕ್ಕಳ ಮೇಳವೇ ಇತ್ತು. ಹಿರಿಯರಾದ ಪ್ರಹ್ಲಾದ ಮೂರ್ತಿ, ಪೇರೂರು ಜಾರು, ಸಾವಿತ್ರಿ ಮನೋಹರ್ ಮೊದಲಾದ ವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಗುರುಸಿದ್ದಯ್ಯ ಸ್ವಾಮಿ, ಸೌಮ್ಯಶ್ರೀ ಸರ್ವೇಶ್ ಜೈನ್ ದಂಪತಿ, ಅಸ್ಮಾಬಾನು ಅಬುಬಕರ್ ದಂಪತಿ, ಬೋಳಾರ ತ್ರಿಶಾಲ್ ಪೂಜಾರಿ, ಸುಧಾ ನಾಗೇಶ್, ಬಸವರಾಜ ಬಾಗೇವಾಡಿ ಮಠ, ಆಸಿಫ್ ಪಡುಬಿದ್ರಿ, ಸಂಶೀರ್ ಬುಡೋಳಿ, ಆಶಾ, ಚನ್ನಮಲ್ಲಪ್ಪ ಮೆಣಸಿನಕಾಯಿ, ಕಸ್ತೂರಿ ಪಂಜ, ರೋಶನ್ ಬೆಳ್ಮಣ್, ಅನು ಬೆಳ್ಳೆ ಮೊದಲಾದವರಿಗೆ ನಾನಾ ವಿಭಾಗದ ಯುವ ರತ್ನ 2023 ಪ್ರಶಸ್ತಿ ಸಂದಿತು. ಇದರ ನಡುವೆ ಕವಿಗೋಷ್ಠಿ ಇತರ ಉತ್ಸವಗಳು ಇದ್ದವು.

## ಹೆದ್ದಾರಿ ಸುಂಕ ದರ ಏಪ್ರಿಲ್ 1ರಿಂದ ಮತ್ತೆ ದುಬಾರಿ

ಎನ್‌ಎಚ್- ರಾಷ್ಟ್ರೀಯ ಹೆದ್ದಾರಿ ಮತ್ತು ಇಡಬ್ಲ್ಯು- ಎಕ್ಸ್‌ಪ್ರೆಸ್ ವೇ (ದೌಡು ರೋಡು) ಗಳ ಟೋಲ್ ಪ್ರತಿ ವರುಷ ಮರು ಪರಿಶೀಲನೆ ಆಗುತ್ತದೆ. ಈ ಬಾರಿ ಹೆದ್ದಾರಿ ಸುಂಕ ಏರಿಸಲು ಎನ್‌ಎಚ್‌ಎಐ- ಭಾರ ತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪಿಐಯು- ಯೋಜನೆ ಅನುಷ್ಠಾನ ಘಟಕವು ತೀರ್ಮಾನಿಸಿದೆ.



ಮಾರ್ಚ್ 25ರೊಳಗೆ ಪಿಐಯು ಪರಿಷ್ಕೃತ ದರವನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಲಿದ್ದು, ಹೊಸ ದರವು ಏಪ್ರಿಲ್ 1ರಿಂದ ಜಾರಿಗೆ ಬರುತ್ತದೆ.

ರಾಷ್ಟ್ರೀಯ ಹೆದ್ದಾರಿ ಮತ್ತು ದೌಡು ರೋಡುಗಳ ಸುಂಕವನ್ನು 5ರಿಂದ 10 ಶೇಕಡಾ ಏರಿಸಲು ಯೋಜಿಸಲಾಗಿದೆ. 20 ಕಿಮೀ ಒಳಗಿನವರಿಗೆ ನೀಡುವ ಮಾಸಿಕ ಪಾಸು ದರ ಕೂಡ ಈಗ ತಿಂಗಳಿಗೆ ರೂ. 315 ಇರುವುದು 350 ಮುಟ್ಟಲಿದೆ. ಹಾಗೆಯೇ ಇತರ ಸುಂಕವನ್ನು ಕೂಡ 5ರಿಂದ 10 ಶೇಕಡಾ ಏರಿಸಲಾಗುತ್ತಿದೆ.

## ಮಂಗಳೂರು ಹುಬ್ಬಳ್ಳಿ ನೇರ ವಿಮಾನ ಯಾನ ರದ್ದು ಮಾಡಿದ ಇಂಡಿಗೋ

ಇಂಡಿಗೋ ವಿಮಾನ ಸಂಸ್ಥೆಯು ಕಳೆದ ಮುಕ್ಕಾಲು ವರುಷದಿಂದ ಮಂಗಳೂರು ಹುಬ್ಬಳ್ಳಿ ನಡುವೆ ಸೋಮವಾರ, ಬುಧವಾರ, ಶುಕ್ರವಾರ ನೇರ ವಿಮಾನ ಸೇವೆ ನೀಡುತ್ತಿದ್ದುದನ್ನು ಇಂದಿನಿಂದ ನಿಲ್ಲಿಸಿದೆ.

ವಾರದ ಈ ಮೂರು ದಿನಗಳಲ್ಲಿ ಸಂಜೆ ಒಂದು ಯಾನ ಈಚೆಗೂ ಒಂದು ಹಾರಾಟ ಆಚೆಗೂ ಇತ್ತು. ಸರಿಯಾಗಿ ಜನ ಬರುತ್ತಿಲ್ಲ. ನಷ್ಟದಲ್ಲೇ ವರುಷವೆಲ್ಲ ನಡೆಸುವುದು ಸಾಧ್ಯವಿಲ್ಲ ಎಂದು ಇಂಡಿಗೋ ಸಂಸ್ಥೆ ಹೇಳಿದೆ.

## ಮಿಲಾಗ್ರಿಸ್ ಕಾಲೇಜು: ಎನ್ ಎಸ್ ಎಸ್ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನೆ



ಮಿಲಾಗ್ರಿಸ್ ಕಾಲೇಜು ಮಂಗಳೂರು ರಿನ ರಾಷ್ಟ್ರೀಯ ಸೇವಾ ಯೋಜನೆ ಯ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನಾ ಸಮಾರಂಭವು ಸಂತ ಥೋಮಸ್ ಅನುದಾ ನಿತ ಹಿರಿಯ ಪ್ರಾಥಮಿಕ ಶಾಲೆ, ಚೇಳೂರಿನಲ್ಲಿ ನೆರವೇರಿತು.

ಸಂತ ಥೋಮಸ್ ದೇವಾಲ ಯದ ಧರ್ಮಗುರುಗಳಾದ ವಂ ಮೈಕಲ್ ಡಿಸಿಲ್ವಾ ಕಾರ್ಯಕ್ರಮ ವನ್ನು ಉದ್ಘಾಟಿಸಿದರು.

ಸಜಿಪ ಪಡು ಗ್ರಾಮ ಪಂಚಾಯತಿನ ಅಧ್ಯಕ್ಷರಾದ ವಿಠ್ಠಲ್ ದಾಸ್ ಅವರು ತಮ್ಮ ಸಂಪೂರ್ಣ ಸಹಕಾರವನ್ನು ನೀಡುತ್ತೇನೆ ಎಂದು ಆಶ್ವಾಸನೆ ನೀಡಿದರು.

ಮಂಗಳೂರಿನ ಮಿಲಾಗ್ರಿಸ್ ವಿದ್ಯಾಸಂಸ್ಥೆಯ ಸಂಚಾಲಕರಾದ ವಂ ಗು ಬೋನವೆಂಚರ್ ನಜರೆತ್ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದರು.

ಮಿಲಾಗ್ರಿಸ್ ಕಾಲೇಜಿನ ಪ್ರಾಂಶುಪಾಲರಾದ ವಂ ಮೈಕಲ್ ಸಂತುಮಾಯರ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಂತ ಥೋಮಸ್ ದೇವಾಲಯದ ಪಾಲನಾ ಸಮಿತಿಯ ಉಪಾಧ್ಯಕ್ಷರಾದ ರಾಬರ್ಟ್ ಡಿಸೋಜ ಹಾಗೂ ಕಾರ್ಯದರ್ಶಿಗಳಾದ ಲವೀನಾ ರೊಡ್ರಿಗಸ್ ಉಪಸ್ಥಿತರಿದ್ದರು.

ರಾ. ಸೇ.ಯೋಜನೆಯ ಯೋಜನಾಧಿಕಾರಿ ಕು ಶ್ರಾವ್ಯ ಎನ್ ಸ್ವಾಗತಿಸಿದರು. ಶಿಬಿರದ ನಾಯಕ ವಿನಿತ್ ಫರ್ನಾಂಡೀಸ್ ವಂದಿಸಿದರು. ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕಿ ಸುಶ್ಮಿತಾ ನಿರೂಪಿಸಿದರು. ಈ ವಾರ್ಷಿಕ ಶಿಬಿರದಲ್ಲಿ 51 ವಿದ್ಯಾರ್ಥಿಗಳು ಭಾಗವಾಗಿರುತ್ತಾರೆ.



**ಸಂತ ಜೆರೋಸಾ ಪ್ರೌಢ ಶಾಲೆ, ಜೆಪ್ಪು, ಮಂಗಳೂರು ಇಲ್ಲಿ ಮುಖ್ಯಶಿಕ್ಷಕಿಯಾಗಿರುವ ವೀಣಾ ಲೀಡಿಯಾ ಲೋಬೊ (ಸಿಸ್ಟರ್ ವಿನಿಶಾ) ಇವರು 'ವಿಮೆನ್ ಇನ್ ಡಯಾಸ್ಪರಾ' ಎ ಸ್ಟಡಿ ಆಫ್ ಸೆಲೆಕ್ಟ್ ಫಿಷನ್ ಬೈ ಕಾಮಿಲಾ ಶಮ್ಸಿ' ಮಹಾಪ್ರಬಂಧವನ್ನು ಪ್ರೊ ರವಿಶಂಕರ್ ಇವರ ಮಾರ್ಗದರ್ಶನದಲ್ಲಿ ಮಂಡಿಸಿದ್ದು, ಮಂಗಳೂರು ವಿಶ್ವವಿದ್ಯಾನಿಲಯದಿಂದ ಇವರಿಗೆ ಪಿಎಚ್'ಡಿ ಪದವಿಯನ್ನು ನೀಡಲಾಗಿದೆ.**

## ಕ್ರಿಯೇಟಿವ್ ಕಾಲೇಜಿನ ಇಶಾನ್ ಪಿ ಸುಬ್ಬಾಪುರ್ ಮಠ್‌ಗೆ IIT ಪರೀಕ್ಷೆಯಲ್ಲಿ ರ್‍ಯಾಂಕ್



ಕಾರ್ಕಳ: ವೃತ್ತಿ ಶಿಕ್ಷಣ ತರಬೇತಿ ನೀ ಡುವ ದೇಶದ ಪ್ರತಿಷ್ಠಿತ ವಿದ್ಯಾಸಂಸ್ಥೆ IIT ಬಾಂಬೆಯ ವರು ನಡೆಸಿದ UCEED ಪರೀಕ್ಷೆ ಯಲ್ಲಿ ಕಾರ್ಕಳ ದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಇಶಾನ್ ಪಿ ಸುಬ್ಬಾಪುರಮಠ್ 95.53 ಅಂಕ ಗಳಿಸಿ ಆಲ್ ಇಂಡಿಯಾ ರ್‍ಯಾಂಕಿಂಗ್ ನಲ್ಲಿ 1919 ನೇ ಸ್ಥಾನ ಪಡೆದಿರುತ್ತಾನೆ. IIT ಯಲ್ಲಿ ಡಿಸೈನ್ಸ್ ಕೋರ್ಸ್ ನ ಪ್ರವೇಶಾತಿಗಾಗಿ ಜನವರಿ 2023 ರಲ್ಲಿ ನಡೆದ ಪರೀಕ್ಷೆಯಲ್ಲಿ ಇಶಾನ್ ಅತ್ಯುತ್ತಮ ಅಂಕಗಳಿಸುವ ಮೂಲಕ ಸಂಸ್ಥೆಗೆ ಮತ್ತು ಹೆತ್ತವರಿಗೆ ಕೀರ್ತಿ ತಂದಿರುತ್ತಾನೆ.

ವಿದ್ಯಾರ್ಥಿಯ ಈ ಸಾಧನೆಗೆ ಕ್ರಿಯೇಟಿವ್ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ, ಉಪನ್ಯಾಸಕ ವರ್ಗದವರು ಮತ್ತು ಸಾರ್ವಜನಿಕ ಸಂಪರ್ಕ ಅಧಿಕಾರಿ ಲಿಶನ್ ಗೌಡ ಅಭಿನಂದನೆ ಸಲ್ಲಿಸಿದ್ದಾರೆ.

## ಸಾಹಿತ್ಯ ಅಕಾಡೆಮಿ ದೆಹಲಿ ಕೊಂಕಣಿ ಭಾಷಾ ಮುಖ್ಯಸ್ಥರಾಗಿ ಮಂಗಳೂರು ಮೂಲದ ಕವಿ ಮೆಲ್ವಿನ್ ರೊಡ್ರಿಗಸ್ ಆಯ್ಕೆ



ಕೊಂಕಣಿ ಕವಿ, ಕಾರ್ಯಕರ್ತ ಹಾಗು ಕೊಂಕಣಿ ಕಾವ್ಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಕವಿತಾ ಟ್ರಸ್ಟ್ ಇದರ ಸ್ಥಾಪಕ ಕರಾವಳಿ ಮೂಲದ ಕವಿ ಮೆಲ್ವಿನ್ ರೊಡ್ರಿಗಸ್ ಸಾಹಿತ್ಯ ಅಕಾಡೆಮಿ, ದೆಹಲಿಯಲ್ಲಿ ಕೊಂಕಣಿ ಭಾಷೆಯ ಮುಖ್ಯಸ್ಥರಾಗಿ ಆಯ್ಕೆಯಾಗಿದ್ದಾರೆ. ಇಂದು ದಿನಾಂಕ 11 ಮಾರ್ಚ್ 2023 ರಂದು, ಸಂವಿಧಾನದ ಎಂಟನೆ ಪರಿಚ್ಛೇದದಲ್ಲಿ ಮಾನ್ಯತೆ ಪಡೆದಿರುವ ಭಾರತದ ಎಲ್ಲಾ ಭಾಷೆಗಳ ಸುಮಾರು 99 ಪ್ರತಿನಿಧಿಗಳು ಭಾಗವಹಿಸಿದ್ದ ಸಾಹಿತ್ಯ ಅಕಾಡೆಮಿ ಜನರಲ್ ಕಾವ್ನ್ಸಿಲ್ ಸಭೆಯಲ್ಲಿನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆಯಿತು. ಕೊಂಕಣಿ ಭಾಷೆಯ ಇತಿಹಾಸದಲ್ಲೆ ಪ್ರಪ್ರಥಮ ಬಾರಿಗೆ ಗೋವಾ ರಾಜ್ಯದ ಹೊರಗೆ, ಕರ್ನಾಟಕ ರಾಜ್ಯಕ್ಕೆ ಈ ಮನ್ನಣೆ ಪ್ರಾಪ್ತವಾಗಿದೆ. ಮುಂದಿನ 5 ವರ್ಷಗಳ ಅವಧಿಗೆ ಕವಿ ಮೆಲ್ವಿನ್ ರೊಡ್ರಿಗಸ್ ಸಾಹಿತ್ಯ ಅಕಾಡೆಮಿಯಲ್ಲಿ ಈ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ.

ಇದೇ ವರ್ಷದ ಜನವರಿ ತಿಂಗಳಲ್ಲಿ ಕವಿ ಮೆಲ್ವಿನ್ ಸಾಹಿತ್ಯ ಅಕಾಡೆಮಿಯ ಜನರಲ್ ಕಾವ್ನ್ಸಿಲ್‌ಗೆ ಆಯ್ಕೆಯಾಗಿದ್ದರು. ಅವರ ಹೆಸರನ್ನು ಸಾಹಿತ್ಯ ಅಕಾಡೆಮಿಯ ಹಿಂದಿನ ಜನರಲ್ ಕಾವ್ನ್ಸಿಲ್ ಕೊಂಕಣಿ ಭಾಷೆಯ ಅಂಗೀಕೃತ ಸಂಸ್ಥೆಗಳ ಶಿಫಾರಸಿನಂತೆ ಸೂಚಿಸಿತ್ತು. ಗೋವಾ ರಾಜ್ಯದಿಂದ ಪೂರ್ಣಾನಂದ ಚಾರಿ ಇವರನ್ನು ಗೋವಾ ಸರಕಾರ ನೇಮಿಸಿತ್ತು.

ಉದ್ಯಮ ನಿರ್ವಹಣೆಯಲ್ಲಿ ಸ್ನಾತಕ ಮತ್ತು ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಕವಿ ಮೆಲ್ವಿನ್ ಪ್ರಸ್ತುತ ಮಂಗಳೂರಿನ ದೈಜಿವರ್ಲ್ಡ್ ಸಂಸ್ಥೆಯಲ್ಲಿ ನಿರ್ದೇಶಕರಾಗಿದ್ದಾರೆ. ಮಧ್ಯ ಪ್ರಾಚ್ಯದಲ್ಲಿ ಸುಮಾರು 15 ವರ್ಷಗಳ ಕಾಲ ಗುಣಮಟ್ಟ ಪರಿಶೋಧಕರಾಗಿ ಸೇವೆ ಸಲ್ಲಿಸಿದ ಅನುಭವ ಅವರಿಗಿದೆ.

ಕೊಂಕಣಿ ಕವಿತೆಯ ಏಳಿಗೆಗಾಗಿ ಅವಿರತ ಶ್ರಮಿಸುತ್ತಿರುವ ಕವಿತಾ ಟ್ರಸ್ಟ್ ಸ್ಥಾಪಕರಾಗಿ ಈ ವರೆಗೆ ಕೊಂಕಣಿ ಕಾವ್ಯಕ್ಕೆ ಸಂಬದಿಸಿದಂತೆ ಸುಮಾರು 220 ಕಾರ್ಯಕ್ರಮಗಳನ್ನೂ, 34 ಪುಸ್ತಕಗಳನ್ನೂ ಪ್ರಕಟಿಸಿರುತ್ತಾರೆ. 6 ಕವನ ಸಂಕಲನಗಳು, 2 ಪ್ರಬಂಧ ಸಂಕಲನಗಳು, 1 ಕೊಂಕಣಿ ಹಾಡುಗಳ ಧ್ವನಿಸುರುಳಿ, 3 ಭಾಷಾಂತರ ಕೃತಿಗಳು, 6 ಸಂಪಾದಿತ ಕೃತಿಗಳು, 1 ನೀಳ್ಗತೆಯನ್ನು ಅವರು ಪ್ರಕಟಿಸಿರುತ್ತಾರೆ.

ಗೋವಾದ ಕಾಣಕೋಣದಲ್ಲಿ 2019 ರಲ್ಲಿ ನಡೆದ 24 ನೇ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವ ಅವರು, ಮಂಗಳೂ ರಿನ ವಿಶ್ವ ಕೊಂಕಣಿ ಕೇಂದ್ರದ ಕೊಂಕಣಿ ಭಾಷೆ ಮತ್ತು ಸಾಂಸ್ಕೃತಿಕ ಕೇಂದ್ರದ ವಿಶ್ವಸ್ಥರೂ ಆಗಿರುತ್ತಾರೆ.

ಕರ್ನಾಟಕ ಸರಕಾರದ ಕೊಂಕಣಿ ಸಾಹಿತ್ಯ ಅಕಾಡೆಮಿಯಿಂದ ಗೌರವ ಪುರಸ್ಕಾರ ಸೇರಿದಂತೆ ರಾಜ್ಯ ಮಟ್ಟದ ಸಂದೇಶ ಪ್ರಶಸ್ತಿ, ದೊಹಾ ಖತಾರ್‌ನ ಎಂ.ಸಿ.ಎ. ಕಲಾ ಪುರಸ್ಕಾರ, ದಾಯ್ಜಿ ದುಬಯ್ ಸಾಹಿತ್ಯ ಪುರಸ್ಕಾರ ಹಾಗೂ ಕೊಂಕಣಿ ಕುಟಮ್, ಬ್ರಾಹೇಯ್ನ್ ಪುರಸ್ಕಾರಗಳಿಗೆ ಅವರು ಭಾಜನರಾಗಿದ್ದಾರೆ.

ಅವರ ಸಾಹಿತ್ಯ ಕೃತಿಗಳಿಗೆ ಸಾಹಿತ್ಯ ಅಕಾಡೆಮಿ ದೆಹಲಿ ಪ್ರಶಸ್ತಿ, ಶ್ರೀಮತಿ ವಿಮಲಾ ವಿ ಪೈ ವಿಶ್ವ ಕೊಂಕಣಿ ಕವಿತಾ ಕೃತಿ ಪುರಸ್ಕಾರ, ಮಣಿಪಾಲದ ಡೊ. ಟಿ. ಎಂ. ಎ. ಪೈ ಪುಸ್ತಕ ಪುರಸ್ಕಾರಗಳು ಪ್ರಾಪ್ತವಾಗಿವೆ.

ಹರ್ಯಾಣದ ಮಾಧವ್ ಕೌಶಿಕ್ ಅವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ, ದೆಹಲಿಯ ಕುಸುಮಾ ಶರ್ಮ ಉಪಾಧ್ಯಕ್ಷರಾಗಿ ಸಾಹಿತ್ಯ ಅಕಾಡೆಮಿಯಲ್ಲಿ ಇಂದು ನಡೆದ ಜನರಲ್ ಕಾವ್ನ್ಸಿಲ್ ಚುನಾವಣೆಯಲ್ಲಿ ಆಯ್ಕೆಯಾಗಿರುತ್ತಾರೆ. ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಗುರುತಿಸಿಕೊಂಡಿರುವ ಎಲ್ಲಾ ಭಾಷೆಗಳಿಗೆ ಮುಖ್ಯಸ್ಥರ ಚುನಾವಣೆಯೂ ಇದೇ ಸಭೆಯಲ್ಲಿ ನಡೆಯಿತು.

## ತಂಬಾಕು ಹಾನಿಯಿಂದ ಜೀವ ರಕ್ಷಣೆಗೆ ವಿಜ್ಞಾನ ಅಗತ್ಯ: ತಜ್ಞರ ಅಭಿಮತ

ಮಂಗಳೂರು: ತಂಬಾಕು ಹಾನಿಯಿಂದ ಮನುಕುಲವನ್ನು ರಕ್ಷಿಸಿ ಎಲ್ಲರಿಗೂ ಉತ್ತಮ, ಹೆಚ್ಚು ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಳ್ಳುವ ಅಗತ್ಯವಿದೆ ಎಂದು ಫಿಲಿಪ್ ಮೋರಿಸ್ ಇಂಟರ್ ನ್ಯಾಷನಲ್ (ಪಿಎಂಐ) ಸಿಇಒ ಜೇಸೆಕ್ ಓಲಾಜೆಕ್ ಅಭಿಪ್ರಾಯಪಟ್ಟಿದ್ದಾರೆ.

ಭಾರತ ಸ್ವಾತಂತ್ರ್ಯದ 'ಅಮೃತ ಕಾಲ'ದಲ್ಲಿ ಭಾರತವು ಮುಂದಿನ 25 ವರ್ಷಗಳಲ್ಲಿ ಸೂಪರ್‌ಪವರ್ ಆಗುತ್ತದೆ ಎಂದು ಬಿಂಬಿಸಲಾಗಿದ್ದು, ಭಾರತವು ತನ್ನ ಗತ ವೈಭವವನ್ನು ಮರಳಿ ಪಡೆಯಲು ಸಾಕ್ಷಿಯಾಗುವ ಬಗ್ಗೆ ಚರ್ಚೆಗಳು ಕೇಂದ್ರಿತವಾಗಿದ್ದವು.

"ಖಾಸಗಿ ಮತ್ತು ಸಾರ್ವಜನಿಕ ರಂಗದ ನಡುವಿನ ಸಹಯೋಗ ದೊಂದಿಗೆ ಸಂಯೋಜಿಸಲ್ಪಟ್ಟ ವಿಜ್ಞಾನ ಮತ್ತು ತಂತ್ರಜ್ಞಾನವು ಕಷ್ಟಕರವಾದ ಸವಾಲುಗಳನ್ನು ಜಯಿಸಲು ಪರಿಹಾರಗಳನ್ನು ಗುರುತಿಸುವಲ್ಲಿ ಪ್ರಮುಖವಾಗಿದೆ ಎಂದು ಸಾಬೀತಾಗಿದೆ. ಮತ್ತು, ಅಂತಿಮವಾಗಿ, ಅಳವಡಿಸಿಕೊಂಡಾಗ ನಮ್ಮೆಲ್ಲರ ಜೀವನವನ್ನು ಸುಧಾರಿಸುತ್ತದೆ" ಎಂದು ಅವರು ಹೇಳಿದರು.


ಉತ್ತಮ ಪರ್ಯಾಯಗಳನ್ನು ಪರಿಚಯಿಸಲು 10 ಶತಕೋಟಿ ಡಾಲರ್‌ಗಿಂತ ಹೆಚ್ಚಿನ ಹೂಡಿಕೆಯನ್ನು ಹೊಗೆ ಮುಕ್ತ ಭವಿಷ್ಯ ಮತ್ತು ವಿಜ್ಞಾನ, ತಂತ್ರಜ್ಞಾನ ಮತ್ತು ವಾಣಿಜ್ಯೀಕರಣದಲ್ಲಿ ಹೂಡಿಕೆ ಮಾಡಲು ಪಿಎಂಐ ಬದ್ಧವಾಗಿದೆ ಎಂದು ಪ್ರಕಟಿಸಿದರು.

ಭಾರತದಲ್ಲಿನ 200 ದಶಲಕ್ಷ ಮೌಖಿಕ ತಂಬಾಕು ಬಳಕೆದಾರರಿಗೆ ಆಧುನಿಕ, ಸುರಕ್ಷಿತ, ಮೌಖಿಕ ತಂಬಾಕು ಉತ್ಪನ್ನಗಳನ್ನು ಪರ್ಯಾಯವಾಗಿ ನೀಡಬೇಕು ಎಂದು ಸಲಹೆ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ವಿವಿಧ ಗಣ್ಯರು ಪಾಲ್ಗೊಂಡಿದ್ದ ಇಟಿ ಗ್ಲೋಬಲ್ ಬ್ಯುಸಿನೆಸ್ ಶೃಂಗಸಭೆಯಲ್ಲಿ ಜಾಗತಿಕ ಸಿಇಒಗಳು, ರಾಜ್ಯಗಳ ಮುಖ್ಯಸ್ಥರು, ಚಿಂತನಾಶೀಲ ನಾಯಕರು, ನೀತಿ ನಿರೂಪಕರು, ಶಿಕ್ಷಣ ತಜ್ಞರು ಮತ್ತು ಕಾರ್ಪೊರೇಟ್ ಮುಖ್ಯಸ್ಥರ ಭಾಗವಹಿಸುವಿಕೆಗೆ ಸಾಕ್ಷಿಯಾಯಿತು.

## ಮಂಗಳೂರು ವಿವಿ, ಬ್ಯಾರಿ ಅಧ್ಯಯನ ಪೀಠದಿಂದ ಪುಸ್ತಕ ಬಿಡುಗಡೆ, ಉಪನ್ಯಾಸ ಕಾರ್ಯಕ್ರಮ

ಇಸ್ಮತ್ ಪಜೀರ್ ಬರೆದ ಪಾಲ ಎಂಬ ಪುಸ್ತಕ ಬ್ಯಾರಿ ಅಧ್ಯಯನ ಪೀಠದ ವತಿಯಿಂದ ಹಂಪನಕಟ್ಟೆ ಶಿವರಾಮ ಕಾರಂತ ವೇದಿಕೆಯಲ್ಲಿ ಬಿಡುಗಡೆ ಆಯಿತು.



ಲೇಖಕ ಅಬ್ದುಲ್ ಕುತ್ತೆತ್ತೂರು ಅವರು ಬಿಡುಗಡೆ ಮಾಡಿದರು. ವಿವಿ ಕಾಲೇಜು ಪ್ರಾಂಶುಪಾಲರಾದ ಅನಸೂಯಾ ರೈ ಅಧ್ಯಕ್ಷತೆ ವಹಿಸಿದ್ದರು.

ಬ್ಯಾರಿಗಳೆಂದರೆ ವ್ಯಾಪಾರಿಗಳು. ಹಾಗಾಗಿ ಅವರು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡುದು ಕಡಿಮೆ. ನಾಲ್ಕು ನೂರು ವರುಷಗಳಿಂದ ಜನಪದ ಸಾಹಿತ್ಯ ಉಳಿದು ಬಂದಿದೆ. ಈಗ ಕಾಲು ಶತ ಮಾನದಿಂದ ಬ್ಯಾರಿ ಸಾಹಿತ್ಯ ವ್ಯಾಪಕ ವಾಗಿ ಬೆಳೆದಿದೆ, ಬ್ಯಾರಿ ಹೆಣ್ಣು ಮಕ್ಕಳೂ ಬರೆಯುತ್ತಿದ್ದಾರೆ ಎಂಬ ಅಭಿಪ್ರಾಯ ಮೂಡಿ ಬಂತು.

ಜನಾಬ್ ಮೊಹಮ್ಮದ್ ಆಲಿಯ ವರು ಈ ಸಂದರ್ಭದಲ್ಲಿ ವಿಶೇಷ ಉಪನ್ಯಾಸ ನೀಡಿದರು.

1ನೇ ಪುಟದಿಂದ ಮುಂದುವರಿಯುವುದು

## ಭೋರ್ಗರೆವ ತೀರದಲ್ಲಿ ಹೊಯ್ಗೆಯ ಅರಮನೆ



ಈ ಗೂಡುಗಳನ್ನು ಗಟ್ಟಿಯಾಗಿ ಹಿಡಿದಿಡುವ ಈ ಅಂಟು ಸ್ರವಿಕೆಯು, ಅಲೆಗಳ ಅಪ್ಪಳಿಕೆಯನ್ನು ಸಮರ್ಥವಾಗಿ ತಡೆಯುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ಮರಳಿನ ದಿಬ್ಬಗಳು ಇತರೆ ಜೀವಿಗಳಿಗೂ ಆಶ್ರಯ ನೀಡಿ, ವೈವಿಧ್ಯ ಜೀವವ್ಯವಸ್ಥೆಗೆ ಆಸರೆಯಾಗಿ, ಸಹಬಾಳ್ವೆಯ ಸಂದೇಶವನ್ನೂ ನೀಡುತ್ತವೆ. ಕಡಲ ಸಸ್ಯಗಳು,

ಮೀನಿನ ಮರಿಗಳು, ಸ್ಪಂಜು ಪ್ರಾಣಿಗಳು, ಕುಟುಕು ಕಣವಂತಗಳು, ಮೃದ್ವಂಗಿಗಳಂತಹ ಅನೇಕ ಅಕಶೇರುಕ ಗಳಿಗೂ ಈ ಗೂಡುಗಳು ಆಧಾರವಾಗಿರುತ್ತವೆ.

ಈ ಅಂಟುದ್ರವವು ವಿಶೇಷ ಪ್ರೋಟೀನ್ ಕಿಣ್ವಗಳಿಂದ ಮಾಡಲ್ಪಟ್ಟಿದ್ದು, ಹುಳಗಳು ಅತಿ ತೆಳುವಾದ ಹೊದಿಕೆಯನ್ನು ತಮ್ಮ ಸುತ್ತಲೂ ಸ್ರವಿಸಿ, ಅದರ ಸುತ್ತಲೂ ಮರಳಿನ ಕಣಗನ್ನು ಪೋಣಿಸಿಕೊಳ್ಳುತ್ತವೆ. ಇವುಗಳು ತಮ್ಮ ಗೂಡಿನಬಳಿ ಬರುವ ಇತರೆ ಸಣ್ಣ ಜೀವಿಗಳನ್ನು ಹಿಡಿದು ತಿನ್ನುತ್ತವೆ. ಮೇಲ್ನೋಟಕ್ಕೆ ಈ ವ್ಯವಸ್ಥೆಯು, ಅಲೆಗಳ ಅಪ್ಪಳಿಕೆಯನ್ನು ತಡೆದುಕೊಳ್ಳುವ ಸಾಮರ್ಥ್ಯವಿದ್ದಂತೆ ಕಂಡುಬಂದರೂ, ಆ ಪ್ರದೇಶದ ಬಂಡೆ ಕಲ್ಲುಗಳನ್ನು ಈ ಹುಳಗಳು ಸಂಪೂರ್ಣವಾಗಿ ಆಕ್ರಮಿಸಿ, ಅಲ್ಲಿನ ಮೂಲ ಪ್ರಬೇಧಗಳಿಗೆ ಕಂಟಕಪ್ರಾಯವಾಗುತ್ತದೋ? ಅಥವಾ, ಸುತ್ತಲಿನ ಮರಳನ್ನು ಅಸ್ಥಿರಗೊಳಿಸುತ್ತವೋ? ಇವುಗಳ ಸ್ರವಿಕೆಯು ಒಳಗಿಂದೊಳಗೆ ಕಲ್ಲುಗಳ ಸವಕಳಿಗೆ ಕಾರಣವಾಗಿ ತಲೆನೋವಾಗಿ ಪರಿಣಮಿಸುತ್ತದೋ? ಎಂದು ತಿಳಿಯಲು ಇವುಗಳ ಮೇಲೆ ಕಣ್ಣಿಟ್ಟು, ಸೂಕ್ತ ವೈಜ್ಞಾನಿಕ ಸಂಶೋಧನೆ ಯನ್ನು ಕೈಗೊಳ್ಳುವ ಅಗತ್ಯವಿದೆ.

ಮಂಗಳೂರಿನ ಕರಾವಳಿ ಪ್ರದೇಶಗಳಲ್ಲಿ ಈ ಹುಳಗಳು ಕಂಡುಬಂದಿದ್ದು, ಉಳ್ಳಾಲ, ಸುರತ್ಕಲ್ ತೀರಗಳ ಬಂಡೆ ಕಲ್ಲುಗಳ ಮೇಲೆ ಕಾಣಸಿಗುತ್ತವೆ. ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ, ಅನ್ವಯಿಕ ಜೀವಶಾಸ್ತ್ರ ಪ್ರಯೋಗಾಲಯವು, ಸಮುದ್ರ ಸಸ್ಯಗಳ ಮೇಲೆ ಕಳೆದ ಮೂರ್ನಾಲ್ಕು ವರ್ಷಗಳಿಂದ ಸಂಶೋಧನೆಯಲ್ಲಿ ತೊಡಗಿದ್ದು, ಈ ವಿಶಿಷ್ಟ ಹುಳಗಳು ಸಂಶೋಧಕರ ಗಮನ ಸೆಳೆದು, ಈ ನಿಟ್ಟಿನಲ್ಲಿ, ಆಧುನಿಕ ತಂತ್ರಜ್ಞಾನದ ಸಹಾಯದಿಂದ ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯುತ್ತಿದೆ. ವಂ. ಡಾ. ಲಿಯೋ ಡಿಸೋಜಾ ಹಾಗೂ ಡಾ. ಶಶಿಕಿರಣ್ ನಿವಾಸ್ ಅವರ ಮಾರ್ಗದರ್ಶನದಲ್ಲಿ, ಸುಧೀಕ್ಷಾ ಕಿರಣ್, ಸಚಿನ್ ಪಟವರ್ಧನ್, ಜೇನ್ ಜೇಮ್ಸ್, ಸುಲಕ್ಷಣಾ ಕಾರ್ಕಳ ಅವರನ್ನೊಳಗೊಂಡ ಸಂಶೋಧನಾ ತಂಡ ಈ ವಿಷಯದ ವಿವಿಧ ಆಯಾಮಗಳ ಪರಿಶೀಲನೆ ನಡೆಸುತ್ತಿದೆ.

## ಟಾಟಾ ಟೆಕ್ನಾಲಜೀಸ್ ಡಿಆರ್‌ಎಚ್‌ಪಿ ಸಲ್ಲಿಕೆ

ಮಂಗಳೂರು: ಜಾಗತಿಕ ಮೂಲ ಉಪಕರಣ ತಯಾರಕರಿಗೆ ಉತ್ಪನ್ನ ಅಭಿವೃದ್ಧಿ ಮತ್ತು ಟರ್ನ್‌ಕೀ ಪರಿಹಾರಗಳನ್ನು ಒಳಗೊಂಡಂತೆ ಡಿಜಿಟಲ್ ಪರಿಹಾರಗಳನ್ನು ಒದಗಿಸುವ ಪ್ರಮುಖ ಜಾಗತಿಕ ಎಂಜಿನಿಯರಿಂಗ್ ಸೇವೆಗಳ ಕಂಪನಿಯಾದ ಟಾಟಾ ಟೆಕ್ನಾಲಜೀಸ್ ಲಿಮಿಟೆಡ್ ತನ್ನ ಡ್ರಾಫ್ಟ್ ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್ ("ಡಿಆರ್‌ಎಚ್‌ಪಿ") ಅನ್ನು ಮಾರುಕಟ್ಟೆ ನಿಯಂತ್ರಕ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ") ಗೆ ಸಲ್ಲಿಸಿದೆ.

95,708,984 ಈಕ್ವಿಟಿ ಷೇರುಗಳನ್ನು ಆಫರ್ ಫಾರ್ ಸೇಲ್ ಮೂಲಕ ಕಂಪನಿ ಆರಂಭಿಕ ಸಾರ್ವಜನಿಕ ಕೊಡುಗೆಯಾಗಿ ಬಿಡುಗಡೆ ಮಾಡಲಿದೆ. ಇದು ಅದರ ಪಾವತಿಸಿದ ಷೇರು ಬಂಡವಾಳದ ("ಐಪಿಒ") ಸರಿಸುಮಾರು ಶೇಕಡ 23.60 ನ್ನು ಪ್ರತಿನಿಧಿಸುತ್ತದೆ.

ಮಾರಾಟದ ಕೊಡುಗೆಯು (ಎ) ಟಾಟಾ ಮೋಟಾರ್ಸ್ ಲಿಮಿಟೆಡ್‌ನಿಂದ 81,133,706, (ಬಿ) ಆಲ್ಫಾ ಟಿಸಿ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ 9,716,853 (ಸಿ) ಟಾಟಾ ಕ್ಯಾಪಿಟಲ್ ಗ್ರೋತ್ ಫಂಡ್ 1 ನಿಂದ 4,858,425 ಈಕ್ವಿಟಿ ಷೇರುಗಳನ್ನು ಒಳಗೊಂಡಿರುತ್ತದೆ. ಇದು ಟಾಟಾ ಟೆಕ್ನಾಲಜಿ ಪೇಯ್ಡ್ ಅಪ್ ಷೇರು ಬಂಡವಾಳದ ಶೇಕಡ 20, 2.40 ಮತ್ತು 1.2ರಷ್ಟನ್ನು ಪ್ರತಿನಿಧಿಸುತ್ತದೆ.

ಜೆಎಂ ಫೈನಾನ್ಶಿಯಲ್ ಲಿಮಿಟೆಡ್, ಸಿಟಿ ಗ್ರೂಪ್ ಗ್ಲೋಬಲ್ ಮಾರ್ಕೆಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ಬಿಒಎಫ್‌ಎ ಸೆಕ್ಯುರಿಟೀಸ್ ಇಂಡಿಯಾ ಲಿಮಿಟೆಡ್‌ಗಳು ಬುಕ್ ರನ್ನಿಂಗ್ ಲೀಡ್ ಮ್ಯಾನೇಜರ್‌ಗಳಾಗಿರುತ್ತವೆ ಎಂದು ಪ್ರಕಟಣೆ ಹೇಳಿದೆ.

## ಬಾಲಿವುಡ್ ಹಿರಿಯ ನಟ ಮತ್ತು ನಿರ್ದೇಶಕ ಸತೀಶ್ ಕೌಶಿಕ್(66) ಇನ್ನಿಲ್ಲ



ಬಾಲಿವುಡ್ ಹಿರಿಯ ನಟ ಮತ್ತು ನಿರ್ದೇಶಕ ಸತೀಶ್ ಕೌಶಿಕ್(66) ಬುಧವಾರ ಮುಂಬೈನಲ್ಲಿ ನಿಧನರಾದರು. ಸತೀಶ್ ಕೌಶಿಕ್ ನಿಧನವನ್ನು ಹಿರಿಯ ನಟ ಅನುಪಮ್ ಖೇರ್ ಟ್ವಿಟರ್‌ನಲ್ಲಿ ಖಚಿತಪಡಿಸಿದ್ದಾರೆ. ನಟ, ಹಾಸ್ಯನಟ, ಚಿತ್ರಕಥೆಗಾರ, ನಿರ್ದೇಶಕ ಮತ್ತು ನಿರ್ಮಾಪಕರಾಗಿ ಖ್ಯಾತಿಗಳಿಸಿದ್ದ ಅವರು ಗುರುಗ್ರಾಮ್ ನಲ್ಲಿ ಆಪ್ತರೊಬ್ಬರನ್ನು ಭೇಟಿಯಾಗಲು ತೆರಳುತ್ತಿದ್ದಾಗ ಅವರ ಆರೋಗ್ಯದಲ್ಲಿ ಏರುಪೇರಾಗಿ ಹೃದಯಾ ಘಾತವಾಗಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಏಪ್ರಿಲ್, 13, 1956 ರಲ್ಲಿ ಹರ್ಯಾಣದಲ್ಲಿ ಜನಿಸಿದ, ಸತೀಶ್ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಮತ್ತು ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ ಹಳೆಯ ವಿದ್ಯಾರ್ಥಿ ಮತ್ತು ರಂಗಭೂಮಿಯ ಮೂಲಕ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ್ದರು.

## ಹಸಮಣೆ ಏರಲು ಸಜ್ಜಾದ 'ಗೂಗ್ಲಿ' ನಟಿ ಕೃತಿ ಕರಬಂಧ




ಯಶ್ ಅಭಿನಯದ ಗೂಗ್ಲಿ ಸಿನಿಮಾದ ಮೂಲಕ ಮನೆಮಾತಾಗಿದ್ದ ಕೃತಿ ಕರಬಂಧ ಅವರು ಇದೀಗ ಪುಲ್ಕಿತ್ ಸಾಮ್ರಾಟ್ ಅವರೊಂದಿಗೆ ಹಸಮಣೆ ಏರಲು ಸಜ್ಜಾಗಿದ್ದಾರೆ.

ಕೃತಿ ಕರಬಂಧ ಅವರು ಕನ್ನಡದ ಸಾಕಷ್ಟು ಸಿನಿಮಾಗಳಲ್ಲಿ ನಟಿಸಿದ್ದಾರೆ. ಅದರಲ್ಲೂ ಗೂಗ್ಲಿ ಸಿನಿಮಾದಲ್ಲಿ ಕೃತಿ ಕರಬಂಧ ಮೋಡಿ ಮಾಡಿದ್ದು, ಇದೀಗ ಬಾಲಿವುಡ್ ಸಿನಿಮಾದಲ್ಲಿ ನಟಿಸುತ್ತ ಅಲ್ಲಿಯೇ ಸೆಟಲ್ ಆಗಿದ್ದಾರೆ.

ಇನ್ನು ಪುಲ್ಕಿತ್ ಮತ್ತು ಕೃತಿ ಈ ವರ್ಷದ ಅಂತ್ಯದೊಳಗೆ ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ ಎನ್ನಲಾಗುತ್ತಿದೆ. ಸದ್ಯದಲ್ಲಿಯೇ ಈ ಕುರಿತು ಅಧಿಕೃತ ಅಪ್‌ಡೇಟ್ ಕೂಡ ಹೊರಬೀಳಲಿದೆ ಎಂದು ಹೇಳಲಾಗುತ್ತಿದೆ.

## ಆಸ್ಕರ್ ಪ್ರಶಸ್ತಿ ಪ್ರದಾನ ವೇದಿಕೆಯಲ್ಲಿ ಮಿಂಚಲಿರುವ ದೀಪಿಕಾ ಪಡುಕೋಣೆ



ಮುಂಬೈ: ವಿಶ್ವದ ಪ್ರತಿಷ್ಠಿತ ಪ್ರಶಸ್ತಿ ಆಸ್ಕರ್‌ಗೆ ದಿನಗಣನೆ ಪ್ರಾರಂಭವಾಗಿದ್ದು, ಈ ಬಾರಿಯ ಆಸ್ಕರ್ ಕಾರ್ಯಕ್ರಮದ ನಿರೂಪಣೆಯ ಹೊಣೆಯನ್ನು ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಹೊರಲಿದ್ದಾರೆ.

ಈ ಮಾಹಿತಿಯನ್ನು ಸ್ವತಃ ದೀಪಿಕಾ ಅವರೇ ಸೋಷಿಯಲ್ ಮೀಡಿಯಾ ಮೂಲಕ ಅಭಿಮಾನಿಗಳಿಗೆ ತಿಳಿಸಿದ್ದು, ದೀಪಿಕಾಗೆ ಶುಭಶಯದ ಸುರಿಮಳೆ ಸುರಿದಿದೆ.

ಮಾರ್ಚ್ 12ರಂದು (ಭಾರತೀಯ ಕಾಲಮಾನದ ಪ್ರಕಾರ ಮಾರ್ಚ್ 13) ಲಾಸ್ ಏಂಜಲೀಸ್ ನಲ್ಲಿ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಇನ್ನು ಈ ಸಮಾರಂಭದಲ್ಲಿ ಹತ್ತು ಜನ ನಿರೂಪಕರು ಕೆಲಸ ಮಾಡಲಿದ್ದು, ಅದರಲ್ಲಿ ದೀಪಿಕಾ ಪಡುಕೋಣೆ ಕೂಡ ಒಬ್ಬರು. ದೀಪಿಕಾ ಜೊತೆ ಮೆಲಿಸ್ಸಾ ಮೆಕಾರ್ಥಿ, ಜಾನೆಲ್ಲೆ ಮೋನೆ, ಜೆನ್ನಿಫರ್ ಕೊನ್ನೆಲ್ಲಿ, ಸ್ಯಾಮ್ಯುಯೆಲ್ ಎಲ್ ಜಾಕ್ಸನ್, ಜೋ ಸಲ್ಡಾನಾ ಸೇರಿದಂತೆ ಇತರರು ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

## 'ಸರ್ಕಸ್' ತುಳು ಸಿನಿಮಾ ಜೂನ್ 23 ಕ್ಕೆ ತೆರೆಗೆ



**ಮಂಗಳೂರು:** ತುಳು ಸಿನಿಮಾರಂಗದ ರಾಕ್ ಸ್ಟಾರ್, ಬಿಗ್ ಬಾಸ್ ಒಟಿಟಿ ಹಾಗೂ ಸೀಸನ್ 9ರ ವಿನ್ನರ್ ರೂಪೇಶ್ ಶೆಟ್ಟಿ ನಿರ್ದೇಶನ ಮತ್ತು ಅಭಿನಯದ "ಸರ್ಕಸ್" ತುಳು ಸಿನಿಮಾ ಜೂನ್ 23ರಂದು ಸಿನಿಮಾ ಅದ್ದೂರಿಯಾಗಿ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಸಿನಿಮಾವನ್ನು ಏಕಕಾಲದಲ್ಲಿ ವಿದೇಶದಲ್ಲೂ ಬಿಡುಗಡೆಗೊಳಿಸಲು ಯೋಜನೆ ರೂಪಿಸಿದ್ದಾರೆ.

ಗಿರಿಗಿಟ್, ಗಮ್ಜಾಲ್ ಗೆ ಸಂಭಾಷಣೆ ಬರೆದ ಪ್ರಸನ್ನ ಶೆಟ್ಟಿ ಬೈಲೂರು ಈ ಸಿನಿಮಾಕ್ಕೂ ಸಂಭಾಷಣೆ ಬರೆದಿದ್ದಾರೆ.

ಸಲಗ ಖ್ಯಾತಿಯ ಯಶ್ ಶೆಟ್ಟಿ ಸರ್ಕಸ್ ಮೂಲಕ ತುಳುವಿಗೆ ಪರಿಚಯ ಆಗುತ್ತಿದ್ದಾರೆ. ಅದೇ ರೀತಿ ರಚನಾ ರೈ ಎಂಬ ನಟಿಯನ್ನು ರೂಪೇಶ್ ತುಳು ಸಿನಿಮಾ ರಂಗಕ್ಕೆ ಪರಿಚಯಿಸುತ್ತಿದ್ದಾರೆ.

ತುಳು ಚಿತ್ರಗಳ ಸಾಮಾನ್ಯ ಪ್ರಕಾರವೇ ಹಾಸ್ಯ. 'ಸರ್ಕಸ್' ನಲ್ಲೂ ಅದೇ ಪ್ರಧಾನ ವಸ್ತು. ರೂಪೇಶ್ ಶೆಟ್ಟಿ ನಿರ್ದೇಶಿಸಿ ಪ್ರಧಾನ ಪಾತ್ರ ನಿರ್ವಹಿಸುತ್ತಿದ್ದಾರೆ. ಇಲ್ಲಿ ರಾಕೇಶ್ ಕದ್ರಿ ಕ್ರಿಯೇಟಿವ್ ಹೆಡ್ ಆಗಿ ಕೆಲಸ ಮಾಡುತ್ತಿದ್ದಾರೆ.

ಉಳಿದಂತೆ ತುಳು ಚಿತ್ರರಂಗದ ಘಟಾನುಘಟಿ ಕಲಾವಿದರಾದ ನವೀನ್ ಡಿ. ಪಡೀಲ್, ಭೋಜರಾಜ ವಾಮಂಜೂರು, ಅರವಿಂದ ಬೋಳಾರ್, ಸಾಯಿಕೃಷ್ಣ ಕುಡ್ಲ, ಪ್ರಸನ್ನ ಶೆಟ್ಟಿ ಬೈಲೂರು, ಸಂದೀಪ್ ಶೆಟ್ಟಿ ಮಾಣಿಬೆಟ್ಟು, ಉಮೇಶ್ ಮಿಜಾರ್, ಚಂದ್ರಹಾಸ ಉಳ್ಳಾಲ್, ನಿತೇಶ್ ಶೆಟ್ಟಿ ಎಕ್ಕಾರ್, ರೂಪಾ ವರ್ಕಾಡಿ, ಪಂಚಮಿ ಭೋಜರಾಜ್, ತಾರಾಗಣದಲ್ಲಿದ್ದಾರೆ.

ಶೂಲಿನ್ ಫಿಲಂಸ್, ಮುಗ್ರೋಡಿ ಫಿಲಂಸ್ ಲಾಂಛನದಡಿಯಲ್ಲಿ ಸರ್ಕಸ್ ಸಿನಿಮಾ ತಯಾರಾಗಿದೆ. ಅನಿಲ್ ಶೆಟ್ಟಿ, ಸುಧಾಕರ ಶೆಟ್ಟಿ, ಮಂಜುನಾಥ ಅತ್ತಾವರ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಕರಾವಳಿಯಾದ್ಯಂತ ಸುತ್ತಮುತ್ತಲಿನ ಪರಿಸರದಲ್ಲಿ ಚಿತ್ರೀಕರಣ ನಡೆದಿದೆ.

ಸಂಭಾಷಣೆ ಪ್ರಸನ್ನ ಶೆಟ್ಟಿ ಬೈಲೂರು, ನವೀನ್ ಶೆಟ್ಟಿ ನೃತ್ಯ ನಿರ್ದೇಶನ, ನಿರಂಜನ ದಾಸ್ ಕ್ಯಾಮರಾ, ರಾಹುಲ್ ವಶಿಷ್ಠ ಸಂಕಲನ, ಲೋಯ್ ಅವರ ಸಂಗೀತ ಈ ಚಿತ್ರಕ್ಕಿದೆ.

# ಓಕುಳಿ


ಬಣ್ಣಗಳ ಹಬ್ಬವಿದು
ರಂಗಿನ ರಂಗಾಟವಿದು
ಕನಸುಗಳ ಕೂಟವಿದು
ಒಲವಿನ ಓಕುಳಿವಿದು

ರಾಧೆಯ ಒಲವ ರಂಗಿನಲಿ
ಶ್ಯಾಮ ಮಿಂದೆದ್ದಿಹನಲ್ಲಿ
ಮಾಧವನ ವರ್ಣವದು ನೀಲಿ ಬಾನು
ರಾಧೆಯ ಕೆನ್ನೆ ಕೆಂಪು ರಂಗೇರಿಸಿದಂತಿದೆ ನೀಲಿ ಬಾನು



ರಾಧೆ ಶ್ಯಾಮನ ರಂಗಿನಾಟ
ಬಣ್ಣ ಬಣ್ಣಗಳ ಕುಸುಮಗಳ ನೋಟ
ಬನ್ನಿ ಹೋಳಿ ಹಬ್ಬಕೆ ಬಾಲರೆಲ್ಲರೂ
ಸಡಗರ ಸಂಭ್ರಮದಿ ಮಿಂಚಿರೆಲ್ಲರೂ

ಕೆಂಪು ಬಣ್ಣ ಸಿಂಧೂರವಾಗಲಿ
ಹಳದಿ ಬಣ್ಣ ಶುಭಶಕುನವಾಗಲಿ
ಹಸಿರು ಬಣ್ಣ ಬಾಳಿಗೆ ಹಸಿರಿರಾಗಿಸಲಿ
ಸಡಗರ ಸಂಭ್ರಮದ ಸಿರಿಯಾಗಲಿ



ಕೇಸರಿ ಬಣ್ಣ ಜ್ಞಾನದ ವೃದ್ಧಿಸಲಿ
ಸೂರ್ಯನಂತೆ ಪ್ರಕಾಶಸಲಿ
ಗುಲಾಬಿ ಬಣ್ಣ ಕನಸಿನ ಶಿಖರವಾಗಿಲಿ
ಬದುಕು ಸಪ್ತ ರಂಗುಗಳಿಂದ ರಂಗಾಗಲಿ


ಅಂಜಲಿ ಶ್ರೀನಿವಾಸ

## ನೂಜೀ ಮನೆಯಲ್ಲೊಂದು ಕಾವೇರಿ ಮಾತೆ....!

ಬದುಕು ಎಂಬುದು ಹರಿಯುವ ನೀರಿನ ಕೊನೆ ಇಲ್ಲದ ಹಾಗೆ ಇಲ್ಲಿ ಯಾವುದು ಶಾಶ್ವತವಲ್ಲ



ಉಳಿಯುವುದು ಒಂದೇ ಹೃದಯವಂತಿಕೆ ಈ ಬದುಕೊಂದು ಗೊಂಬೆ ಯಾಟ ನಾವು ಕೆಲವು ಗೊಂಬೆಗಳ ಆಡಿಸಿದರೆ ನಮ್ಮನ್ನಾಡಿಸ್ವಾತ ಕಾಣಸಿಗ ನು ಮಾನವನ ಬದುಕು ಕಾಯಕ ಹುಡುಕು ಕಲ್ಲು ಕಲ್ಲುಗಳಲ್ಲು ಮಣಿ



ಮಣಿಗಳಂತೆ ಎಲ್ಲೆಲ್ಲೋ ಇಟ್ಟ ಬಣ್ಣ ಬಣ್ಣದ ಮಣಿಗಳಂತೆ ಪೋಣಿಸಿದ ಕಾಯಕ ಕುಸುರಿ ಕೆಲಸ ನೋಡಿದಾಗ ಬಣ್ಣ ಬಣ್ಣದ ಬದುಕಿನಲ್ಲಿ ನಿಜವಾದ ಬದುಕಿನ ಕಷ್ಟ ಅರಿವಾಗಲೇಬೇಕು .ಕಲಾ ಮಿತ್ರ ತನ್ನ ಕೈಚಳಕದ ಕಾವೇರಿ ಮಾತೆಯನ್ನು ಜಲಲ ಧಾರೆಯಲ್ಲಿ ಸುಂದರವಾದ ಪ್ರಕೃತಿಯ ಚಿತ್ರಣವನ್ನು ಅದ್ಭುತವಾಗಿ ಪ್ರದರ್ಶಿಸಿ ಪುತ್ತೂರು ತಾಲೂಕು ಕಬಕ ಗ್ರಾಮದ ನೂಜೀ ವೇ. ಮೂ ರಾಮಕೃಷ್ಣ ಭಟ್ ನೂತನವಾಗಿ ಕಟ್ಟಿಸಿರುವ ಮನೆಯ ಶ್ರೀ ಕೃಷ್ಣ ಮಂಟಪದ ಒಳಭಾಗದಲ್ಲಿ ನಿಜವಾದ ಬದುಕಿನ ಕಷ್ಟ ಅರಿವಾಗಲೇಬೇಕು. ಕಾವೇರಿ ಮಾತೆ ಹರಸು ನಮ್ಮನೆಲ್ಲ...... ನಮನ ನಮ್ಮ.....!! ಕಾಲಕಾಲಕ್ಕೆ ಮಳೆ ಸಮೃದ್ಧಿಸಲಿ ಇಳೆ....! ಎಂಬಂತಿದೆ ಅಲ್ಲವೇ ಕೃಷಿಕನ ಮಾರ್ಮಿಕ ನುಡಿ.ಪಿ

ಚಿತ್ರ: ಸವಿತಾ ಕೋಡಂದೂರ್ ಬರಹ: ಕುಮಾರ್ ಪೆರ್ನಾಜೆ ಪುತ್ತೂರು


# GUIDENCE FOR

- Passport Online
- Adding Spouse Name
- PCC
- Visa Stamping
- Certificate Attestation (Home Department & Embassy)
- Immigration

## PINGARA KANNADA NEWS PAPER

ಕ್ರೀಸ್ತಾಂವಾಚೆ ಏಕ್ ಮಾತ್ರ್ ಕನ್ನಡ ಪತ್ರ್



Raymond Dcunha
MA Journalism, BA LLB, D'thio
ಸಂಪಾದಕ್/Editor
Pingara Paper, Pingara.com

ESTD: 2004 ಪಿಂಗಾರ ಯಶಸ್ವೀ 18 ನೇ ವರ್ಷಕ್ಕೆ ಪಾದಾರ್ಪಣೆ

**ಚಂದಾ ವಿವರ**

| | |
|---|---|
| 1 Year | : Rs. 250/- |
| 5 Year | : Rs.1,000/- |
| 15 Years | : Rs. 3,000/- |
| Lifetime Subscribers | : Rs. 15,000/- |

Cheque Drawn on: Pingara
A/c No.: 510101005980630
IFSC Code: corp0000133
Union Bank of India, Pandeshwar, Mangalore - 575001

Visit Our Website:
www.pingara.com

Pingara, Kodialbail Church Building, 2nd Floor, Kodialbail Post, Mangalore - 575003
Email: pingaara@gmail.com Ph: 9845419482(M) (O) - 0824 2440822



# ST ALOYSIUS COLLEGE (AUTONOMOUS)

Post Box No. 720, St Aloysius College Road, Mangaluru 575003, Karnataka

- Excellence in Education over 143 years
- Re-accredited by NAAC with 'A++' Grade – CGPA 3.67/4 (Cycle IV)
- Ranked 95 in College Category – 2021 under NIRF, Ministry of Education, Govt. of India
- Recognised as Centre for Research Capacity Building under UGC-STRIDE Scheme
- Recognised under the DBT-BUILDER Scheme, Govt. of India
- College with 'STAR STATUS' conferred by DBT, Govt. of India
- Recognised by UGC as 'College with Potential for Excellence'

Contact Office : 0824 4117701 / 04 | Email : principal@staloysius.edu.in | Web : www.staloysius.edu.in

## ADMISSIONS OPEN : 2023-24



### UNDERGRADUATE Programmes Offered as per NEP

- **B.A.:** • History • Economics • Political Science • Sociology • Journalism • Psychology • English Major • Kannada Major • Computer Animation • Social Work
- **B.Sc.:** • Physics • Chemistry • Mathematics • Economics • Computer Science • Electronics • Computer Animation • Statistics • Biochemistry • Botany • Biotechnology • Microbiology • Zoology • Food Science • Visual Communication (New Course)
- **B.Com.** (Regular)
- **B.Com.** (Evening Batch)
- **B.Com.** (ACCA Embedded)
- **B.Com.** (CA Integrated )
- **B.Com.** (Apprenticeship / Internship Embedded)
- **B.B.A.** (Regular)
- **B.B.A.** (Professional)
- **B.B.A.** (Business Analytics)
- **B.C.A.** - as per University Regulations

**Second Language Options:**
English, Hindi, Kannada, Konkani, Sanskrit, Additional English, Malayalam, French

### DIPLOMA & POSTGRADUATE DIPLOMA PROGRAMMES

- Biotechnology Skill Enhancement Programme (BiSEP)
- Business Management (PGDBM)
- Diploma in Vermi-Technology
- Diploma in Konkani Language

### DDU KAUSHAL KENDRA & COMMUNITY COLLEGE

Courses Offered (3 Years)

- B.Voc. (Retail Management)
- B.Voc. (Food Processing & Engineering)
- B.Voc. (Software Development)
- B.Voc. (Renewable Energy Management)
- B.Voc. (Animation & Multimedia)

Hostel facilities available for Boys and Girls

Scholarships and loan facilities available for both UG & PG Programmes


### POSTGRADUATE PROGRAMMES

- M.A. (English)
- M.A. (Economics)
- M.S.W. (Social Work)
- M.A. (Journalism & Mass Communication)
- M.Com.
- M.Com. (Finance & Analytics)
- M.Sc. (Corporate Psychology)
- M.Sc. (Physics)
- M.Sc. (Biotechnology)
- M.Sc. (Mathematics)
- M.Sc. (Food Science & Technology)
- M.Sc. (Food Science, Nutrition & Dietetics)
- M.Sc. (Biochemistry)
- M.Sc. (Chemistry)
- M.Sc. (Analytical Chemistry)

### St Aloysius Institute of Civil Services

(CIVIL SERVICES EXAM COACHING)
Contact Office : 0824 2950131
www.staloysius.edu.in
civilservices@staloysius.edu.in

### ST ALOYSIUS COLLEGE SWIMMING POOL



First of its kind in this region

- Olympics Standard
- 50 meters length
- Complete with state-of-the-art features such as Ozone Purification System, Gallery, Changing Rooms and Gym
- Ample parking area.

Courses offered at AIMIT (St Aloysius College Campus – Beeri)

• M.B.A • M.C.A • M.Sc. (Software Technology) • M.Sc. (Bioinformatics) • M.Sc. (Big Data Analytics) • M.Sc. (Data Science)

Beeri, Kotekar, Mangaluru 575022, Karnataka E-mail : admissions@staloysius.ac.in Web : www.aimit.edu.in
Ph : + 91 824 2286881 / 9141201851 / 9141201852 / 7349710075



Licensed to Post without repayment Licence No.SKWPP/MNG/183/2022-24 Regd. No. MNG/954/2022-2024
Edited, Published & Owned by Raymond D'Cunha, Published at No. 10-156, Suvarna road End, Kankanady 'B Village', Kankanady Post, Mangalore - 575002, DK
Printed by Him at Pingara Printers, No. No. 10-156, Suvarna Road End, Kankanady 'B Village', Kankanady Post, Mangalore - 575002, DK